# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಸಂಪುಟ:02 • ಸಂಚಿಕೆ:15 • ನೋಂದಣಿ ನಂ.:KARKAN27911 • ವಿಜಯನಗರ • 07.07.2024 • ಭಾನುವಾರ • ಪುಟ:04 • ಬೆಲೆ:2
Volume:02 • Issue:15 • Reg.No:KARKAN27911 • VIJAYANAGARA • 07.07.2024 • Sunday • Page:04 • Rs:2









ಮಕ್ಕಳ ಜ್ಞಾನ ವಿಕಾಸಕ್ಕೆ
ಮನೆಗೊಂದು ಕನ್ನಡ ದಿನಪತ್ರಿಕೆ ಇರಲಿ


# ಜನರ ಅಹವಾಲುಗಳಿಗೆ ಭರವಸೆಯೇ ಸಮಾಧಾನ

## ಶಾಸಕರ ಜನಸಂಪರ್ಕ ಸಭೆ। ಗ್ರಾಮದ ಜನರಿಂದ ವಿವಿಧ ಬೇಡಿಕೆಯ 175 ಅಹವಾಲು ಸಲ್ಲಿಕೆ

## ನಾಗೇನಹಳ್ಳಿಯ ದಶಕಗಳ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಲು ಶಾಸಕ ಗವಿಯಪ್ಪ ಸೂಚನೆ

■ ಹಂಪಿ ಟೈಮ್ಸ್ ಹೊಸಪೇಟೆ

ಶಾಸಕರು ಬರ್ತಾರೆ, ಸ್ಥಳದಲ್ಲೇ ಪರಿಹಾರ ಸಿಗುತ್ತೆ ಎಂದು ದಶಕಗಳಿಂದ ಕಾದಿದ್ದ ಅರ್ಜಿದಾರರಿಗೆ ನಿರಾಸೆಯ ಭಾವ ಮೂಡಿತು. ಜನರ ಅನೇಕ ಸಮಸ್ಯೆಗಳು ಕಂದಾಯ ಇಲಾಖೆ ವ್ಯಾಪ್ತಿಗೊಳಪಟ್ಟಿದ್ದರಿಂದ ಸಂಬಂಧಿಸಿದ ತಹಸೀಲ್ದಾರರು ಶಾಸಕರ ಜನಸಂಪರ್ಕ ಸಭೆಗೆ ಗೈರಾಗಿದ್ದರಿಂದ ಅರ್ಜಿದಾರರಿಗೆ ಸಮರ್ಪಕ ಉತ್ತರವೂ ದೊರೆಯಲಿಲ್ಲ. ಶಾಸಕರು, ತಾಪಂ ಇಒ ಅವರ ಭರವಸೆಯ ಮಾತುಗಳೊಂದಿಗೆ ಅರ್ಜಿಗಳು ಕಡತ ಸೇರಿದವು.

ಹೊಸಪೇಟೆ ತಾಲೂಕಿನ ನಾಗೇನಹಳ್ಳಿ ಗ್ರಾಮ ಪಂಚಾಯತಿ ಕೇಂದ್ರಸ್ಥಾನದಲ್ಲಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶನಿವಾರ ಆಯೋಜಿಸಲಾಗಿದ್ದ ಶಾಸಕರ ಜನಸಂಪರ್ಕ ಸಭೆ ತಡವಾಗಿ ಆರಂಭವಾದರೂ, ಮಧ್ಯಾಹ್ನ ಎರಡು ಗಂಟೆವರೆಗೂ ಸಮಾಧಾನದಿಂದ ಅರ್ಜಿದಾರರಿಂದ ಅಹವಾಲು ಆಲಿಸಿ ಅರ್ಜಿಗಳನ್ನು ಪಡೆಯಲಾಯಿತು. ಬಂದಂತಹ ಅನೇಕ ಅರ್ಜಿಗಳಲ್ಲಿ ನಿವೇಶನ, ಮನೆ ಮತ್ತು ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕು. ನಾಗೇನಹಳ್ಳಿ ಗ್ರಾಮ ಪಂಚಾಯಿತಿಯ ಗ್ರಾಮ ಠಾಣಾ ವ್ಯಾಪ್ತಿಗೊಳಪಡದ ಗ್ರಾಮದಲ್ಲಿರುವ ಮನೆಗಳು ಮತ್ತು ನಿವೇಶನಗಳ ಸೇರ್ಪಡೆಗೆ ಗ್ರಾಮಠಾಣಾ ವಿಸ್ತರಿಸಿಕೊಂಡು, ಡಿಮ್ಯಾಂಡ್ ರಿಜಿಸ್ಟರ್‌ನಲ್ಲಿ ಸೇರಿಸಿ ಫಾರಂ ನಂಬರ್ 9-11 ನೀಡಿ, ಮೂಲಭೂತ ಸೌಲಭ್ಯ ಕಲ್ಪಿಸಬೇಕೆಂದು ನಾಗೇನಹಳ್ಳಿ ಸರ್ವ ಸಮುದಾಯಗಳ ಒಕ್ಕೂಟ ಮನವಿ ನೀಡಿ ಒತ್ತಾಯಿಸಿತು. 600 ವಿದ್ಯಾರ್ಥಿಗಳಿರುವ ಗ್ರಾಮೀಣ ಪ್ರದೇಶದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯನ್ನು ಪ್ರೌಢಶಾಲೆಯಾಗಿ ಉನ್ನತಿಕರಣಗೊಳಿಸಬೇಕೆಂದು ದಶಕಗಳಿಂದ ಗ್ರಾಮಕ್ಕೆ ಬಂದ ಶಾಸಕರಿಗೆ, ಜಿಲ್ಲಾಧಿಕಾರಿಗೆ, ಸಂಬಂಧಿಸಿದ ಇಲಾಖೆ ಸಚಿವರಿಗೂ ಮನವಿ ಸಲ್ಲಿಸುತ್ತಾ ಬಂದಿದ್ದರೂ ಶಿಕ್ಷಣದಿಂದ ವಂಚಿತರಾಗುತ್ತಿರುವ ಗ್ರಾಮೀಣ ಮಕ್ಕಳ ಕುರಿತು ಗಂಭೀರವಾಗಿ ಪರಿಗಣಿಸುವವರಿಲ್ಲ ಎಂಬ ಮಾತುಗಳು ದಟ್ಟವಾಗಿ ಕೇಳಿಬಂದವು. ಬೀದಿಯಲ್ಲೆ ಪಾದರಕ್ಷೆಗಳಿಗೆ ಹೊಲಿಗೆ ಹಾಕಿ ಜೀವನ ನಡೆಸುತ್ತಿರುವ ವಿಕಲಚೇತನ ಶೆಡ್ ನೀಡಬೇಕೆನ್ನುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕೆಂದು ಸ್ಥಳೀಯರು ಅರ್ಜಿ ಸಲ್ಲಿಸಿದರು.

ಮನೆ ಮನೆಗೆ ತೆರಳಿ ಗ್ರಾಮದ ಸಮಸ್ಯೆಗಳನ್ನು ಕಣ್ಣಾರೆ ಕಂಡು ಕೇಳಬೇಕೆಂದಿದ್ದ ಶಾಸಕರ ಅಭಿಲಾಷೆಗೆ ಸಮಯದ ಅಭಾವದಿಂದ ಬ್ರೇಕ್ ಬಿದ್ದಿತು. ಶಾಸಕ ಎಚ್.ಆರ್. ಗವಿಯಪ್ಪ ಮಾತನಾಡಿ, ಗೆದ್ದ ಮರುದಿನವೇ ಕ್ಷೇತ್ರದ ಮತದಾರರನ್ನು ಭೇಟಿ ಮಾಡಬೇಕೆಂದುಕೊಂಡಿದ್ದೆ, ಗೆದ್ದ ಸಂಭ್ರಮದಿಂದ ತಮ್ಮನ್ನು ಭೇಟಿ ಮಾಡುವುದಕ್ಕಿಂತ ಕೆಲಸ ಮಾಡುವ ಮೂಲಕ ಗ್ರಾಮೀಣ ಜನರನ್ನು ಭೇಟಿ ಮಾಡಬೇಕೆನ್ನುವ ಉದ್ದೇಶದಿಂದ ಗ್ರಾಮೀಣ ಪ್ರದೇಶಕ್ಕೆ ಜನಸಂಪರ್ಕ ಕಾರ್ಯಕ್ರಮದ ಮೂಲಕ ತಡವಾಗಿ ಆಗಮಿಸಿದ್ದೇನೆ. ಜನರ ಮನೆ ಬಾಗಿಲಿಗೆ ಸರ್ಕಾರ ಬಂದು ಜನರ ಅಳಲನ್ನು ಆಲಿಸಲಿದೆ. ನಿಮ್ಮ ಅಹವಾಲುಗಳಿಗೆ ಅಧಿಕಾರಿಗಳು ಸ್ಪಂದಿಸುತ್ತಾರೆ. ನಿರೀಕ್ಷಿತ ಅಭಿವೃದ್ಧಿ ಕಾರ್ಯಗಳಿಗೆ ಅಗತ್ಯ ಅನುದಾನ ತರುವ ಕೆಲಸ ಮಾಡುವೆ ಎಂದು ಭರವಸೆ ನೀಡಿದರು.

ತಾಪಂ ಇಒ ಹರೀಶ್ ಮಾತನಾಡಿ, ಜನರು ನೀಡಿದ ಅಹವಾಲುಗಳನ್ನು ಸಂಬಂಧಿಸಿದ ವಿವಿಧ ಇಲಾಖೆ ಅಧಿಕಾರಿಗಳ ಗಮನಕ್ಕೆ ತರಲಾಗುವುದು. ಪ್ರತಿಯೊಂದು ಸಮಸ್ಯೆಗೂ ಪರಿಹಾರವೆನ್ನುವುದು ಇರುತ್ತದೆ. ಪ್ರಾಮಾಣಿಕವಾಗಿ ಜನರ ಸಮಸ್ಯೆಗಳಿಗೆ ಪರಿಹಾರ ಒದಗಿಸಲು ಪ್ರಯತ್ನಿಸುತ್ತೇನೆ ಎಂದರು.

ಗ್ರಾಪಂ ಅಧ್ಯಕ್ಷ ದುರುಗಪ್ಪ ಮಾತನಾಡಿ, ಕಂದಾಯ ಇಲಾಖೆಯ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಅನೇಕ ಬಾರಿ ತಹಸೀಲ್ದಾರರಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗುತ್ತಿಲ್ಲ. ಗ್ರಾಮೀಣ ಸಮಸ್ಯೆಗಳಿಗೆ ಸ್ಪಂದನೆ ದೊರೆಯುತ್ತಿಲ್ಲ. ಇನ್ನಾದರೂ ಜನರ ಸಮಸ್ಯೆಗೆ ತಾಲೂಕು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಸ್ಪಂದಿಸಿ ಪರಿಹಾರ ಕಲ್ಪಿಸಬೇಕು ಎಂದರು.

ಭೂ ನ್ಯಾಯ ಮಂಡಳಿಯ ಸದಸ್ಯ ಅಲ್ಲಾ ಭಕ್ತಿ, ಆರೋಗ್ಯ ಇಲಾಖೆ ಸದಸ್ಯ ಗುಡಿ ಗಂಗಪ್ಪ, ವಿದ್ಯುತ್ ಸರಬರಾಜು ಸದಸ್ಯ ಜಿ.ಪುರೋಹಿತ ಗ್ರಾಪಂ ಪಿಡಿಒ, ಸದಸ್ಯರು, ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.



### ಗುಡಿಗಳಿಗಿಂತ ಶಾಲೆಗಳು ದೊಡ್ಡದಾಗಿರಲಿ

ನಾಗೇನಹಳ್ಳಿ ಗ್ರಾಮದಲ್ಲಿರುವ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಹೊಸದಾಗಿ ಯೋಜನೆ ರೂಪಿಸಿರುವ ಎಲ್ ಕೆ ಜಿ ಮತ್ತು ಯುಕೆಜಿ ಶಾಲಾ ತರಗತಿಗಳನ್ನು ಮಕ್ಕಳೊಂದಿಗೆ ರಿಬ್ಬನ್ ಕತ್ತರಿಸುವ ಮೂಲಕ ಶಾಸಕ ಎಚ್.ಆರ್. ಗವಿಯಪ್ಪ ಉದ್ಘಾಟಿಸಿದರು. ಜನಸಂಪರ್ಕ ಸಭೆ ನಂತರ ಬೆನಕಾಪುರ ಗ್ರಾಮದ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಅಂದಾಜು 15.70 ರೂ ಗಳ ಲಕ್ಷ ವೆಚ್ಚದಲ್ಲಿ ನಿರ್ಮಿಸಿದ ಅಡುಗೆ ಕೋಣೆ ಮತ್ತು ಡೈನಿಂಗ್ ಹಾಲ್ ಮತ್ತು 3 ಲಕ್ಷ ರೂ ವೆಚ್ಚದಲ್ಲಿ ನಿರ್ಮಿಸಿದ ಹೈಟೆಕ್ ಶೌಚಾಲಯವನ್ನು ಉದ್ಘಾಟಿಸಿದರು. ನಂತರ ತಾಲೂಕಿನ 82-ಡಣಾಪುರ ನೀಡಿ 46.70 ರೂ. ಲಕ್ಷಗಳ ಜಲಜೀವನ್ ಮಿಷನ್ ಮನೆ ಮನೆಗೆ ಗಂಗೆ ಉದ್ಘಾಟಿಸಿಸಿ, ಮಾತನಾಡಿದ ಅವರು, ದೊಡ್ಡ ಗುಡಿಗಳನ್ನು ಕಟ್ಟದೆ ಶಾಲೆಗಳನ್ನು ದೊಡ್ಡದಾಗಿ ಕಟ್ಟಿಸಿಕೊಳ್ಳಿ ಎಂದು ಗ್ರಾಮಸ್ಥರಿಗೆ ಸಲಹೆ ನೀಡಿದರು.

ಮೈಕ್ರೋ ನ್ಯೂಸ್

### ವಿವಿಧ ಯೋಜನೆಗೆ ಅರ್ಜಿ ಆಹ್ವಾನ

ಹಂಪಿ ಟೈಮ್ಸ್ ಹೊಸಪೇಟೆ

ಹೂವಿನಹಡಗಲಿ ತೋಟಗಾರಿಕೆ ಇಲಾಖೆಯಿಂದ 2024-25ನೇ ಸಾಲಿನ ರಾಷ್ಟ್ರೀಯ ತೋಟಗಾರಿಕೆ ಮಿಷನ್, ಕೇಂದ್ರ ಪುರಸ್ಕೃತ ಪ್ರಧಾನಮಂತ್ರಿ ಕೃಷಿ ಸಿಂಚಾಯಿ (ಹನಿ ನೀರಾವರಿ) ಯೋಜನೆ, ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಯಾಂತ್ರೀಕರಣ ಯೋಜನೆ ಹಾಗೂ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗಳಿಗೆ ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ. ಖಾಯಂ ನೀರಾವರಿ ಸೌಲಭ್ಯವಿರುವ ಹಾಗೂ ತೋಟಗಾರಿಕೆ ಬೆಳೆ ಹೊಂದಿರುವ ಅಥವಾ ಬೆಳೆಯಲು ಆಸಕ್ತಿ ಹೊಂದಿರುವ ರೈತರು ಜುಲೈ 25ರೊಳಗಾಗಿ ಅಗತ್ಯ ದಾಖಲಾತಿಳೊಂದಿಗೆ ಹೂವಿನಹಡಗಲಿ ತೋಟಗಾರಿಕೆ ಇಲಾಖೆಯ ಕಚೇರಿಯಲ್ಲಿ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ರೈತ ಸಂಪರ್ಕ ಕೇಂದ್ರದ ಸಹಾಯಕ ತೋಟಗಾರಿಕೆ ಅಧಿಕಾರಿಗಳು ಹಾಗೂ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರನ್ನು ಸಂಪರ್ಕಿಸಬಹುದು ಎಂದು ತೋಟಗಾರಿಕೆ ಇಲಾಖೆಯ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ತಿಳಿಸಿದ್ದಾರೆ.






### ಶ್ರೀ ಕನಕ ದುರ್ಗಮ್ಮ ದೇವಿ ದೇಗುಲ ಹುಂಡಿ ಎಣಿಕೆ 43,44,266 ರೂ.ಸಂಗ್ರಹ



■ ಹಂಪಿ ಟೈಮ್ಸ್ ಬಳ್ಳಾರಿ

ನಗರದ ಅಧಿದೇವತೆ ಶ್ರೀ ಕನಕ ದುರ್ಗಮ್ಮ ದೇವಿ ದೇಗುಲದ ಹುಂಡಿ ಎಣಿಕೆ ಕಾರ್ಯ ಶನಿವಾರ ಮಾಡಲಾಯಿತು. ಕಳೆದ 2024ರ ಮಾ.16 ರಿಂದ ಜು.6ರ ವರೆಗೆ ಹುಂಡಿಯಲ್ಲಿ ಸಂಗ್ರಹವಾದ ಹಣವನ್ನು ಹಿಂದೂ ಧಾರ್ಮಿಕ ದತ್ತಿ ಇಲಾಖೆ ಸಹಾಯಕ ಕಾರ್ಯನಿರ್ವಾಹಕ ಅಧಿಕಾರಿಗಳು, ದೇಗುಲದ ಆಡಳಿತಾಧಿಕಾರಿ ಹನುಮಂತಪ್ಪ, ದೇಗುಲದ ಪ್ರಧಾನ ಧರ್ಮಕರ್ತ ರಾಜಶೇಖರ, ಬಸವರಾಜ, ಸೇರಿದಂತೆ ವ್ಯವಸ್ಥಾಪಕರು ಇತರರ ನೇತೃತ್ವದಲ್ಲಿ ಹುಂಡಿ ಹಣವನ್ನು ಎಣಿಕೆ ಕಾರ್ಯ ಮಾಡಲಾಯಿತು. ಒಟ್ಟು ಹುಂಡಿಯಲ್ಲಿ 43,44,266 ರೂ. ಹಣ ಜಮಾ ಆಗಿದೆ ಜೊತೆಗೆ ಚಿನ್ನಾಭರಣ ಹಾಗೂ ಬೆಳ್ಳಿ ಸಾಮಗ್ರಿಗಳು ದೇಗುಲಕ್ಕೆ ಸಮರ್ಪಣೆ ಮಾಡಲಾಗಿದ್ದು, ಅದರ ತೂಕವನ್ನು ಎಲ್ಲರ ಸಮಕ್ಷಮ ಮಾಡಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಪೋಲೀಸ್ ಅಧಿಕಾರಿಗಳು, ಸಿಬ್ಬಂದಿಗಳು, ದೇಗುಲದ ಅರ್ಚಕರು, ಸಿಬ್ಬಂದಿಗಳು, ಭಕ್ತರು ಉಪಸ್ಥಿತರಿದ್ದರು.

### ಜುಲೈ 10 ರಿಂದ ಲೋಕಾಯುಕ್ತ ಜನ ಸಂಪರ್ಕ ಸಭೆ

■ ಹಂಪಿ ಟೈಮ್ಸ್ ಹೊಸಪೇಟೆ


ಕರ್ನಾಟಕ ಲೋಕಾಯುಕ್ತ ಹೊಸಪೇಟೆ ಘಟಕದಿಂದ ಲೋಕಾಯುಕ್ತ ಪೊಲೀಸ್ ಉಪಾಧೀಕ್ಷಕರು ಹಾಗೂ ಪೊಲೀಸ್ ನಿರೀಕ್ಷಕರ ನೇತೃತ್ವದಲ್ಲಿ ಜುಲೈ 10ರಂದು ಹಗರಿಬೊಮ್ಮನಹಳ್ಳಿ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ, ಜುಲೈ 16ರಂದು ಹೂವಿನಹಡಗಲಿ ತಾಲೂಕು ಕಚೇರಿ ಸಭಾಂಗಣದಲ್ಲಿ, ಜುಲೈ 23ರಂದು ಹೊಸಪೇಟೆ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಲೋಕಾಯುಕ್ತ ಜನ ಸಂಪರ್ಕ ಸಭೆಗಳು ನಡೆಯಲಿವೆ. ಸಾರ್ವಜನಿಕರು ಅಹವಾಲುಗಳು ಸಲ್ಲಿಸಬಹುದು.



ಹಂಪಿ ಟೈಮ್ಸ್ ಸಂ|ಪಾ|ದ|ಕೀ|ಯ

# ಲೈನ್‌ಕ್ರಾಸ್ ಮಾಡದಿರಿ

ಜಗತ್ತಿನಲ್ಲಿ ಎಲ್ಲರೂ ಒಂದಿಲ್ಲೊಂದು ಒತ್ತಡದಿಂದ ಬಳುತ್ತಿರುವವರೇ ಆಗಿದ್ದಾರೆ. ಇದು ಒಳ್ಳೆಯ ಮನುಷ್ಯರಿಗೂ ಅನ್ವಯ ಮತ್ತು ಕೆಟ್ಟ ಮನಸ್ಥಿತಿ ಹೊಂದಿರುವವರಿಗೂ ಅನ್ವಯ. ಯಾರೂ ಸಂಪೂರ್ಣ ಸಂತೋಷಿಗಳಿಲ್ಲ. ಸಂತೋಷ ಅನುಭವಿಸಲು ಒತ್ತಡದ ವ್ಯವಸ್ಥೆ ಬಿಡುತ್ತಿಲ್ಲ. ನಾವು ಒತ್ತಡದಲ್ಲಿ ನಮ್ಮದನ್ನು ಮತ್ತು ನಮ್ಮದಲ್ಲವನ್ನೂ ಕಳೆದುಕೊಳ್ಳುತ್ತಿದ್ದೇವೆ. ಕೈಯಲ್ಲಿ ಹಣವಿದ್ದರೂ ಮತ್ತು ಇರದಿದ್ದರೂ ಸಂತೋಷ ಮತ್ತು ನೆಮ್ಮದಿ ಜೀವನ ನಮ್ಮದಾಗುತ್ತಿಲ್ಲ. ಏಕೆಂದರೆ ಈಗ ಸಂಪಾದಿಸಿರುವ ಹಣಕ್ಕಿಂತ ಹೆಚ್ಚಿಗೆ ಸಂಪಾದಿಸಬೇಕೆಂಬ ತವಕ–ಅತಿಯಾಸೆ. ಹೋಗಲಿ ಬಡವರಾದವರೂ ನೆಮ್ಮದಿಯಿಂದ ಇದ್ದಾರೆಯೇ ? ಅದೂ ಸಾಧ್ಯವಿಲ್ಲ. ಜೋಪಡಿಯಲ್ಲಿದ್ದವರು ನೆಮ್ಮದಿಯಿಂದ ಜೀವನ ನಡೆಸುತ್ತಾರೆಂಬ ಮಾತನ್ನು ಒಪ್ಪಲು ಸಾಧ್ಯವಿಲ್ಲ. ಭಿಕ್ಷುಕರು, ಅನಾಥರು, ಇದ್ದಂತವರು, ಇಲ್ಲದಂತವರು, ಮಕ್ಕಳು, ವಿದ್ಯಾರ್ಥಿಗಳು, ಹಿರಿಯರು, ಕಿರಿಯರು, ಸಿರಿವಂತರು, ರಾಜಕಾರಣಿಗಳು,



ವೈದ್ಯರು.. ಹೀಗೆ ನೀವು ಯಾರನ್ನೇ ಕೇಳಿ 'ನಿಮ್ಮಲ್ಲಿ ಸಂತೋಷ ಇದೆಯಾ' ಎಂದು. ಊಹೂಂ.. ಯಾರಲ್ಲೂ ಸಂತೋಷ ಕಾಣುವುದಿಲ್ಲ. ಇಷ್ಟಕ್ಕೆಲ್ಲ ಕಾರಣವೇನು ಗೊತ್ತಾ ? ಇದಕ್ಕೆ ಲೈನ್‌ಕ್ರಾಸ್ ಎನ್ನಬಹುದು. ಏನಿದು ಲೈನ್ ಕ್ರಾಸ್ ಎಂದು ನೀವು ಕೇಳಬಹುದು. ಇದಕ್ಕೆ ಸರಳವಾಕ್ಯದಲ್ಲಿ ಹೇಳಬೇಕೆಂದರೆ ಅಗತ್ಯಕ್ಕಿಂತ ಹೆಚ್ಚಿಗೆ ಆಸೆ ಪಡುವುದು ಅಥವಾ ಬಯಸುವುದು. ಆದರೆ, ನಾವಾರೂ ಬಯಕೆ–ಆಸೆಗಳನ್ನು ನಿಯಂತ್ರಿಸುವುದಿಲ್ಲ. ಇವುಗಳನ್ನು ಜವಾಬ್ದಾರಿಗಳೆಂದು ಭಾವಿಸುತ್ತಿದ್ದೇವೆ. ಇದರ ಹಿಂದೆ ಓಡುತ್ತಾ.. ಓಡುತ್ತ.. ನಮ್ಮ ನೆಮ್ಮದಿ ಹಾಳು ಮಾಡಿಕೊಳ್ಳುತ್ತಿದ್ದೇವೆ. ಈ ಓಟ ಎಷ್ಟು ವೇಗವಾಗಿ ಇದೆಯೆಂದರೆ ಇಷ್ಟು ದಿನ ಪಡೆದಿದ್ದನ್ನೆಲ್ಲ ಕಳೆದುಕೊಳ್ಳುವಷ್ಟರ ಮಟ್ಟಿಗೆ ಓಡುತ್ತಿದ್ದೇವೆ. ಈ ಹಿಂದೆ ಹಿರಿಯರು ಹೇಳುತ್ತಿದ್ದ ಗಾದೆ ಮಾತು ಈಗ ನೆನಪಿಗೆ ಬರುತ್ತದೆ. ಹಾಸಿಗೆ ಇದ್ದಷ್ಟು ಕಾಲು ಚಾಚು ಎಂಬ ಗಾದೆ ಮಾತು ಕೇವಲ ಗಾದೆಗೆ ಸೀಮಿತವಾಗಿದೆ. ಆದರೆ, ಬದುಕಿನಲ್ಲಿ ಅಳವಡಿಕೆ ಮಾಡುವುದನ್ನು ಮರೆತಿದ್ದೇವೆ ಅಥವಾ ಉದ್ದೇಶಪೂರ್ವಕವಾಗಿ ಅದನ್ನು ಬದಿಗಿಡುತ್ತಿದ್ದೇವೆ ಎನ್ನಿಸುತ್ತಿದೆ. ಈಗದು ಗಾದೆ ಮಾತು ಹೇಗೆ ಬದಲಾಗಿದೆ ಎಂದರೆ ಹಾಸಿಗೆ ಇದ್ದಷ್ಟು ಕಾಲು ಚಾಚುವುದಿಲ್ಲ, ಬದಲಿಗೆ ಹಾಸಿಗೆಯನ್ನೇ ಇನ್ನಷ್ಟು ಉದ್ದ ಮಾಡಿಕೊಳ್ಳುತ್ತೇವೆ ಎಂಬ ಅಹಮಿಕೆಯೇ ಈಗ ಬುದ್ಧಿವಂತಿಕೆಯಂತಾಗಿದೆ. ಭಿಕ್ಷುಕನಿಗೂ ಮತ್ತಷ್ಟು ಬೇಡುವ ಆಸೆ, ನಿಗದಿತ ಸಂಬಳ ಪಡೆಯುವವನಿಗೂ ಪರೋಕ್ಷವಾಗಿ ಇನ್ನಷ್ಟು ಸಂಪಾದಿಸುವ ಆಸೆ, ವಿದ್ಯಾರ್ಥಿಗಳಿಗೆ ಹೆಚ್ಚು ಅಂಕಗಳಿಸುವಾಸೆ, ವ್ಯಾಪಾರಿಗೆ ತನ್ನ ವಹಿವಾಟನ್ನು ಮತ್ತಷ್ಟು ವಿಸ್ತರಿಸುವ ಬಯಕೆ, ಗೃಹಿಣಿಗೆ ತನ್ನ ಕೊರಳಲ್ಲಿ ಮತ್ತಷ್ಟು ಚಿನ್ನ ಧರಿಸಬೇಕೆಂಬ ಆಸೆ. ಸಿರಿವಂತನಿಗೆ ತಾನು ಸಂಪಾದಿಸಿದ್ದು ಕಡಿಮೆ ಎಂಬ ಭಾವ, ಕಳ್ಳರಿಗೆ ಮತ್ತಷ್ಟು ಸುಲಿಗೆ ಮಾಡಬೇಕೆಂಬ ಕೃತ್ಯದ ಯೋಚನೆ, ಸಿರಿವಂತರಿಗೆ ತಮ್ಮ ಸಾಮ್ರಾಜ್ಯವನ್ನು ಮತ್ತಷ್ಟು ವಿಸ್ತರಿಸುವ ಬಯಕೆ.. ಹೀಗೆ ಎಲ್ಲರಲ್ಲೂ ಬಯಕೆಗಳು ಹೆಚ್ಚಾಗುತ್ತಿವೆಯೇ ವಿನಾ, ಬದಲಿಗೆ ಸಂತೋಷವನ್ನು ಹೆಚ್ಚಿಗೆ ಮಾಡಿಕೊಳ್ಳಬೇಕೆಂಬ ಬಯಕೆ ಯಾರಿಗೂ ಬರುತ್ತಿಲ್ಲ. ಒಂದು ರೀತಿಯಲ್ಲಿ ಸಂಪಾದನೆಯೇ ಸಂತೋಷ ಎಂಬುದನ್ನು ಘೋಷವಾಕ್ಯವನ್ನಾಗಿ ಮಾಡಿಕೊಂಡಿದ್ದಾನೆ ಮನುಷ್ಯ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

# ವ್ಯತಿರಿಕ್ತ ಪರಿಣಾಮ..!

ಸರಿ ಸುಮಾರು ನನಗೆ ಆರು ವರ್ಷ ನನ್ನ ತಂಗಿಗೆ ನಾಲ್ಕು ಇರಬಹುದು, ನಾವಿಬ್ಬರೂ ಮನೆಯಲ್ಲಿ ಚಿಕ್ಕ ಮಕ್ಕಳು ಇನ್ನೂ ನಮ್ಮ ಜಗತ್ತಿನಲ್ಲಿ ಆಟ ಆಟ ಆಟ ಆಟದ ಹೊರತು ಬೇರೇನು ಇರಲಿಲ್ಲ. ಹಾಗೆ ನೋಡೊದಾದರೆ ನಾನು ಸ್ವಲ್ಪ ನನ್ನ ತಂಗಿಗಿಂತ ಬುದ್ಧಿವಂತ. ಒಮ್ಮೆ ನನ್ನ ಪುಸ್ತಕದ ಪ್ರಯೋಗ ಬುದ್ಧಿ ಚುರುಕಾಗಿ ನಾನು ಮತ್ತು ನನ್ನ ತಂಗಿ ಸೇರಿ ನಮ್ಮ ಕಣದಲ್ಲಿ ಇರುವ ಬತ್ತದ ಬಣವಿ ಹಿಂದೆ ಹೋಗಿ, ಒಂದು ಸಣ್ಣ ಪ್ರಯೋಗ ಮಾಡಲು ತೀರ್ಮಾನ ಮಾಡಿ ಕಾರ್ಯ ಪ್ರವೃತ್ತರಾದೆವು.

ನಿಮಗೆಲ್ಲ ನೆನಪು ಇರಬೇಕಲ್ಲಾ ಅದೆ ನಮ್ಮ ಆರನೇ ತರಗತಿಯ ಪಠ್ಯ ಪುಸ್ತಕದ ಪ್ರಯೋಗ " ರಕ್ತ ಪರೀಕ್ಷೆ ಮಾಡುವ ವಿದಾನ " ಅದೇ ಇಂದಿನ ನಮ್ಮ ಪ್ರಯೋಗದ ವಿಷಯ ವಸ್ತುವಾಗಿತ್ತು. ನಮಗೆ ತಿಳಿದಾಂಗ ಒಂದು ಚಿಕ್ಕ ಗಾಜಿನ ಲೋಟ, ಇನ್ನೊಂದು ಚಿಕ್ಕ ಸ್ಟೀಲಿನ ಲೋಟ, ಸಣ್ಣದೊಂದು ಕಲ್ಲು ಇವು ನಮ್ಮ ಪ್ರಯೋಗಕ್ಕೆ ಬೇಕಾದ ವಸ್ತುಗಳು, ಇನ್ನು ನಾವಿಬ್ಬರು ಸರ್ಸ್ವವತಂತ್ರ ಸ್ವತಂತ್ರ, ಸ್ವಯಂ ಪ್ರೇರಿತ, ಮಳಕೆ ವಿಜ್ಞಾನಿಗಳು ಯಾಕಂದರ "ಬೆಳೆಯುವ ಸಿರಿ ಮೊಳಕಿಯಲ್ಲಿ" ಅಂತಾರಲ್ಲ ಹಾಗೆ ಯಾರಿಗು ತಿಳಿಯದ ಹಾಗೆ ದಿನವೊಂದನ್ನು ಗೊತ್ತುಮಾಡಿ ವಿದ್ಯುಕ್ತವಾಗಿ ಬತ್ತದ ಬಣವಿ ಹಿಂದೆ ನಮ್ಮ ಪ್ರಯೋಗವನ್ನು ಪ್ರಾರಂಭ ಮಾಡಿದ್ವಿ.



ವಯಸ್ಸಿನಲ್ಲಿ, ವಿದ್ಯಾಭ್ಯಾಸದಲ್ಲಿ, ಅನುಭವದಲ್ಲಿ ನನಗೆ ತಿಳಿದಂತೆ ನನ್ನ ಮಟ್ಟಿಗೆ ಹೇಳುವುದಾದರೆ ನಮ್ಮಬ್ಬಿರಲ್ಲಿ ಸ್ವಲ್ಪ ಬುದ್ಧಿವಂತ ಅಂದರೆ ನಾನೇ!!! ಅಲ್ಲವೆ. ಅದು ಮೇಲ್ನೋಟಕ್ಕೆ ಗೊತ್ತಾದರು ಪ್ರಾಸಂಗಿಕವಾಗಿ ಇಲ್ಲಿ ಹೇಳಬೇಕಾದ ಅನಿವಾರ್ಯ ಅಷ್ಟೆ. ಯೋಜನೆಯಂತೆ ನಮ್ಮ ಪ್ರಯೋಗ ಪ್ರಾರಂಭವಾಯಿತು, ಮೊದಲೇ ಹೇಳಿದಂತೆ ಹಿರಿಯರಾದ ನಾವೆ ಪ್ರಯೋಗಕ್ಕೆಂದು ನಮ್ಮ ಕೈಯನ್ನು ಕೊಯ್ದಿಕೊಳ್ಳಲು ನಿರ್ಧರಿಸಿದವು..!

ಕೈಯಲ್ಲಿದ್ದ ಗಾಜಿನ ಬಾಟಲಿಯನ್ನು ಕಲ್ಲಿಗೆ ಪಳ್ಳೆಂದು ಒಂದೆ ಹೊಡತಕ್ಕೆ ಒಡೆದು, ಅದರಿಂದ ಒಂದು ಪಳ ಪಳ ಎಂದು ಹೊಳೆವ, ಚೂಪಾದ ಗಾಜಿನ ಚೂರೊಂದನ್ನು ಕೈಗೆತ್ತಿಕೊಂಡು, ನಡುಗುತಿದ್ದ ಇನ್ನೊಂದು ಕೈಯಲ್ಲಿ ಕಲ್ಲನ್ನು ಹಿಡಿದು, ಮನಸ್ಸಿನಲ್ಲಿ ದೇವರನ್ನು ನೆನೆದು, ಏಕೆ "ವಿಜ್ಞಾನಿಗಳಾದ ಮಾತ್ರಕ್ಕೆ ದೇವರನ್ನು ನೆನೆಯಬಾರದು ಎಂದೇನಿಲ್ಲವಲ್ಲ" ಜೋರಾಗಿ ಒಮ್ಮೆ ಧೀರ್ಘ ಉಸಿರು ತೆಗೆದುಕೊಂಡು, ಇನ್ನೇನು ಕೈಯ ಒಂದು ಬೆರಳು ಕಟ್ಟುಮಾಡಿಕೊಳ್ಳಬೇಕೂ ಎನ್ನುವಾಗ, ಮನೆಯವರೆಲ್ಲ ಒಂದು ಬಾರಿ ಕಣ್ಣು ಮುಂದೆ ಬಂದಂತಾಗಿ ನನ್ನ ತಂಗಿಯ ಮುಖವನ್ನು ಒಮ್ಮೆ ನೋಡಿದೆ, ಅವಳು ನಾನು ಕೊಟ್ಟ ಕೆಲದಲ್ಲಿ ತಲ್ಲೀನಳಾಗಿ ಕೈಯಲ್ಲಿದ್ದ ಲೋಟವನ್ನು ಒಂಚೋರು ಅಲುಗಾಡಿಸದೆ ಹಿಡಿದು ನಿಂತಿದ್ದಳು.

ಅವಳ ಕಣ್ಣುಗಳು ಯಾವಾಗ ನಾನು ನನ್ನ ಕೈಯ ಬೆರಳನ್ನು ಗಾಜಿನಿಂದ ಕತ್ತರಿಸಿಕೊಳ್ಳುತ್ತೇನೆ ಮತ್ತು ಅವಳು ಯಾವಾಗ ನನ್ನ ರಕ್ತವನ್ನು ನೋಡತೀನಿ ಅಂತಿದ್ದವು, "ಮನ್ನು ಸಾಯಿತಿ ಮಗನ ನೀ ಸತ್ತೇ ಹೋಗತಿ ಅಂತಿತ್ತು" ಒಂದು ಸಲ ಮೈಯಲ್ಲ ಬೆವತು ಗಂಟಲು ಒಣಗಿ ಯಾಕರ ನಾ ಈ ಪ್ರಯೋಗ ಹಮ್ಮಿಕೋಂಡೆ ಅನ್ನಿಸ್ತು.



ಜಿ ಶಿವಕುಮಾರ್ ಸೋಗಿ
ಲೇಖಕರು, ಕಾರವಾರ ಕೈಗಾ

Hampi Times E-paper
SCAN AND READ

ಆದರು ಕೊಟ್ಟ ಮಾತು ನನಗಿಂತ ಕಿರಿಯ ವಿಜ್ಞಾನಿ ಮುಂದೆ ಹೇಗೆ ಹೇಳಿಕೊಳ್ಳೊದು, ಏನ್ ಮಾಡೊದು ಈಗಾಗಲೆ ಎಷ್ಟು ಸಾಧ್ಯವೋ ಅಷ್ಟು ನಮ್ಮನ್ನು ನಾವೆ ಹೆಚ್ಚಿಸಿಕೊಂಡು ಹೇಳಿ ಆಗಿತ್ತು. ದ?ರ್ಯ ಮಾಡಿ ಹರಹರ ಗುರು ಕೊಟ್ಟೋರೇಶ್ವರ ಅಂತ ಕೈಯ ಒಂದು ಬೆರಳನ್ನು ಗಾಜಿನ ಚೂರಿನಿಂದ ಕೊಯ್ದುಕೊಳ್ಳಲು ಬೀಸಿದ ರಬಸ ಮತ್ತು ನನಗಿದ್ದ ಭಯಕ್ಕೆ ಅದು ತಪ್ಪಿ ಮದ್ದೆದ ಬೆರಳಿನ ತುದಿಯನ್ನು ತಾಕಿ ರಕ್ತ ಜಲ್ ಅಂತ ಚಿಮ್ಮಿತು...! ಹಾಗೆ ತಪ–ತಪ ಎನ್ನುತ್ತಾ ಸುರಿಲಿಕ್ಕೆ ಪ್ರಾರಂಭವಾಯ್ತು, ನನ್ನ ಎದೆ ಜಲ್ ಎಂದಿತು..!

ಆ ಸನ್ನಿವೇಷದಲ್ಲೊ ಏಕಾಗ್ರತೆಯಿಂದ ನನ್ನ ರಕ್ತ ಚಿಮ್ಮುವ ಕೈಯನ್ನೆ ದಿಟ್ಟಿಸುತ್ತ ಕುಳಿತಿರುವ ನನ್ನ ತಂಗಿಯನ್ನು ನೋಡಿದಾಗ, ಅವಳ ವೃತ್ತಿಪರತೆಯನ್ನು ಕಂಡು ಒಮ್ಮೆ ಸಂತಸವಾದರೆ ಮತ್ತೊಮ್ಮೆ ನನ್ನ ರಕ್ತ ಕುಡಿಯಲಿಕ್ಕೆ ಅಂತಾನೆ ಕಾದು ಕುಳಿತಿರೊ ಮಾರಮ್ಮನ ತರ ಕಂಡುದ್ದು ಸುಳ್ಳಲ್ಲ.

ಆ ಸನ್ನಿವೇಷವನ್ನು ಒಮ್ಮೆ ನೋಡಿ ಎದಿ ದಸಕ್ಕ ಅಂತು, ಕೈ ನಡಗಲಿಕ್ಕೆ ಪ್ರಾರಂಭವಾಯುತು, ಮೈಯಲ್ಲ ಬೆವತು ಉಸರ ನಿಂತಾಂಗ ಆಯುತು, ಹೊಟ್ಯಾಗ ಒಂತರಾ ಸಂಕಟ ಶುರುವಾಗಿ ಇನ್ನೇನು ಸತ್ತೆ ಹೊಗತೀನಿ ಅನಿಸಿ, ತಂಗಿ ಕಡಿಗೆ ನೋಡಿದರೆ! ನಮ್ಮವ್ವ ಒಂದು ಹನಿ ರಕ್ತನೂ ಹಾಳಾಗಬಾರದು ಅಂತ ಅಲ್ಲಲ್ಲೆ ಲೋಟ ಹಿಡಿಯಾಕತ್ತಿದ್ದಳು.

ಮೊದಲ ಮಟ–ಮಟ ಮದ್ಯಾಹ್ನ ನಮ್ಮ ಪ್ರಯೋಗ ನೆಡದಿತ್ತ, ಕಣ್ಣಿಗೆ ಕತ್ತಲ ಆದಂಗ ಆಗಿ ಬಾಯಿ ವಣಗಿ ಬಾಯಾರಿಕೆ ಆಯ್ತು, ಓಡಬೆ ಓಡಿ ಹೋಗಿ ಕುಡಿಯಾಕ ನೀರು ತಗಂಡು ಬಾ ಅಂದ ತಕ್ಷಣ, ನಮ್ಮವ್ವ ನನ್ನ ತಾಯಿ ನೀರು ತರುವ ಅವಸರದಲ್ಲಿ ಕೈಯಾಗಿನ ರಕ್ತದ ಲೋಟ ತೆಗೆದುಕೊಂಡೆ ಮನೀಗೆ ಹೋಗಿಬಿಟ್ಟಳು, ಇದನ್ನು ನೋಡಿದ ನಮ್ಮವ್ವ ಏನದು? ಅಂತ ಕೇಳಿದ್ದಕ್ಕ ಹೆದರಿ ಅಣ್ಣ ಕೈಯ ಕೊಯ್ಕೊಂಡಾನ ಅಂತ ಇದ್ದದ್ದ ಇದ್ದಂಗ ಹೇಳಿ ನಮ್ಮ ಸೀಕ್ರೇಟನ್ನೇ ಹಾಳುಮಾಡಿದ್ದಲ್ಲದ ಆ ವಿಷಯ ರಾತ್ರಿ ನಮ್ಮಪ್ಪನ ತನಕ ಮುಟ್ಟಿ ಮೈಮೇಲೆ ಕಡುಬಿನ ತರ ಗೊಬ್ಬಿ ಬರೊಹಾಂಗ ಬಡ್ತಾ ತಿಂದದ್ದು, ಇನ್ನು ಹಚ್ಚ–ಹಸಿರಾಗಿ ಬೆನ್ನಮೇಲೆ ಹಾಗೆ ಇದೆ.

ಅಲ್ಲಿಗೆ ನಮ್ಮ ಪ್ರಯೋಗದ ಪರಿಣಾಮ ಏನಾಗಿರಬಹುದು ಅಂತ ನೀವೆ ಊಹಿಸಬಹುದು, ಆಗುತ್ತವೆ ಕೆಲವು ಸಲ ಪ್ರಯೋಗದಲ್ಲಿ ಇಂತಹ ವ್ಯತಿರಿಕ್ತ ಪರಿಣಾಮ ಉಟಾಗತವೆ!. ಹಾಗಂತ ಅಂದುಕೊಂಡು ಎಲ್ಲಾ ವಿಜ್ಞಾನಿಗಳು ಸುಮ್ಮನೆ ಕುಳಿತಿದ್ದರೆ ಇಂದು ನಾವು ಇಷ್ಟೊಂದು ನಡೆಸಲು ಸಾಧ್ಯವಿರಲಿಲ್ಲ ಅಲ್ಲವೇ? ಅಂದುಕೊಂಡು ಸುಮ್ಮನಾದೆ.

ಮರುದಿನ ನಮ್ಮಪ್ಪ ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ನನ್ನ ಕೈಗೆ ಬ್ಯಾಂಡೇಜ್ ಹಾಕಿಸಿಕೊಂಡು ಬಂದಿದು, ಹಾಗೆ ಬರುವಾಗ ದಾರಿಯಲ್ಲಿ ಪಳಾರ ಕೊಡಿಸಿ ಇನ್ನು ಮುಂದೆ ಈ ರೀತಿಯಲ್ಲಿ ಒಬ್ಬನೇ ಯಾವುದೇ ಪ್ರಯೋಗ ಮಾಡಬೇಡ ಅಂದಿದ್ದು ನನಗೆ ಬಹಳ ಖುಶಿಯಾಗಿತ್ತು, ಏಕೆಂದರೆ ಅಂದು ನಮ್ಮಪ್ಪ ನಾನು ಮಾಡಿದ್ದು ಒಂದು ಪ್ರಯೋಗವೆಂದು ಒಪ್ಪಿಕೊಂಡಂತೆ ಎನಿಸಿದ್ದು ಸುಳ್ಳಲ್ಲ. ನನ್ನನ್ನು ನಮ್ಮಪ್ಪ ಅವರ ಹೆಗಲ ಮ್ಯಾಲೆ ಕೊಡಿಸಿಕೊಂಡು ದಾರಿಯಲ್ಲಿ ಬರುತಿದ್ದಾಗ, ಎದುರಿಗೆ ಸಿಕ್ಕ ನಮ್ಮ ಅತ್ತೆ ಕೆಳಗಿಳಿಸೊ ಮಾರಾಯ ಅವನೇನು ಎಳೆ ಕೂಸಲ್ಲ ಅಂದಿದ್ದಕ್ಕ "ಮಕ್ಕಳು ಎಷ್ಟು ದೊಡ್ಡವು ಆದರು ಮಕ್ಕಳಲ್ಲವೇ ಅಂದಿದ್ದು ಇನ್ನು ನನಗ ಹಾಗೆ ನೆನಪದೆ".

ನಿಜ ಹೇಳಬೇಕಂದರೆ ಆ ದಿನ ನಾವು ಮಾಡಿದ ಪ್ರಯೋಗ ತಪ್ಪಾಗಿರಬಹುದು, ಮಾಡಿದ ರೀತಿ, ತೆಗೆದುಕೊಂಡ ತೀರ್ಮಾನ ಎಲ್ಲವೂ ತಪ್ಪೆ ಎಂದಿಟ್ಟುಕೊಂಡರೂ. ನಮ್ಮಲ್ಲಿ ಇಂತಹದೊಂದು ಸಾದ್ಯತೆಯನ್ನು ಹುಟ್ಟು ಹಾಕಿದ್ದು ಅಧ್ಬುತವಲ್ಲದೆ ಮತ್ತೇನು. ದೂರದಲ್ಲಿ ಸುಂದರವಾದ ಬೆಟ್ಟದ ಮಲ್ಲೇಶ್ವರ ಗುಡ್ಡ, ಸಣ್ಣ–ಸಣ್ಣ ಹಳ್ಳಿಗಳು, ಹಳೆ ಮಣ್ಣಿನ ಮನೆಗಳು, ನಮ್ಮ ಮನೆಯಿಂದ ಸ್ವಲ್ಪವೆ ದೂರದಲ್ಲಿದ್ದ ನಮ್ಮ ಹೊಲಗಳು, ಬೇಸಿಗೆ ಬಂದರೆ ಸಾಕು ನಮಗೆಲ್ಲ ಶಾಲಿಗೆ ರಜೆ ಕೊಡತಿತ್ತು, ನಾವೆಲ್ಲ ದನ ಕರುಗಳನ್ನು ಹಿಡಕೊಂಡು ಅವುಗಳನ್ನು ಮೇಯಿಸಲಿಕ್ಕೆ ಅಂತ ಹೊಲದ ಕಡೆಗೆ ಹಟ್ಟಿಕೊಂಡು ಹೊಗೊದು, ಅಲ್ಲೆ ನಮ್ಮ ಹೊಲದ ಮಧ್ಯ ಹರಿಯುತ್ತಿದ್ದ ಹಳ್ಳದಲ್ಲಿ ಸ್ನಾನ ಮಾಡಿ, ಬೇವಿನ ಮರದ ಕೆಳಗೆ ಕೂತ್ಕೋಂಡು ಊಟ ಮಾಡುತಿದ್ದರಿಂದಲೇ ಏನೋ ನಾವು ಪ್ರಕೃತಿಯೊಂದಿಗೆ ಒಂದು ಸಹಜ ಮತ್ತು ಸೂಕ್ಷ್ಮ ಸಂವೇದನೆಯನ್ನು ಹೊಂದಿದ್ದೆವು.

ಹಾಗಾಗಿ ಈ ರೀತಿಯ ಪ್ರಯೋಗ ಮಾಡುವಂತಹ ಮನಸ್ಥಿತಿ ಬಾಲ್ಯದಿಂದಲೇ ನಮ್ಮಲ್ಲಿ ಹಾಸುಹೊಕ್ಕಾಗಿತ್ತು ಎಂದರೆ ತಪ್ಪಿಲ್ಲ. ಹಾಂ... ಪ್ರಯೋಗ ಮಾಡುವುದಿದ್ದರೆ ಪರಿಪಕ್ವವಾದಂತ ಜ್ಞಾನ, ತಿಳುವಳಿಕೆ ಅಗತ್ಯ ಮಾರ್ಗದರ್ಶನ ಬೇಕೆಂಬುದನ್ನು ಮನಗಾಣಬೇಕು. ಇಲ್ಲದಿದ್ದರೆ ಇಂತಹ ಕೆಲ ವ್ಯತಿರಿಕ್ತ ಪರಿಣಾಮಗಳು ಉಂಟಾಗುತ್ತವೆ ಹುಷಾರ್.

# ಆರೋಗ್ಯ ಕೇಂದ್ರಕ್ಕೆ ಚಾಲನೆ

## ನ್ಯಾ. ಎಂ.ಜಿ.ಶುಕುರೆ ಕಮಾಲ ಹೇಳಿಕೆ | ಆರೋಗ್ಯ ಕೇಂದ್ರ ಉದ್ಘಾಟನೆ ಕಾರ್ಯಕ್ರಮ

■ **ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ಪ್ರಾರಂಭಿಸಲಾದ ಆರೋಗ್ಯ ಕೇಂದ್ರಕ್ಕೆ ಗೌರವಾನ್ವಿತ ಕೊಪ್ಪಳ ಜಿಲ್ಲೆಯ ಆಡಳಿತಾತ್ಮಕ ನ್ಯಾಯಾಧೀಶರು ಆಗಿರುವ ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯ ಮೂರ್ತಿಗಳಾದ ಎಂ.ಜಿ ಶುಕುರೆ ಕಮಾಲ ಅವರು ರಿಬ್ಬನ್ ಕತ್ತರಿಸುವುದರ ಮೂಲಕ ಜುಲೈ 06ರಂದು ಚಾಲನೆ ನೀಡಿದರು.

ಆರೋಗ್ಯವು ಪ್ರತಿಯೊಬ್ಬರಿಗೂ ಮುಖ್ಯವಾಗಿದ್ದು, ಈ ದಿಶೆಯಲ್ಲಿ ನ್ಯಾಯಾಧೀಶರು, ವಕೀಲರು, ಕಕ್ಷಿದಾರರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ಪ್ರಾರಂಭಿಸಲಾದ ಆರೋಗ್ಯ ಕೇಂದ್ರದ ಉದ್ಘಾಟನೆ ಕಾರ್ಯಕ್ರಮವು ಕೊಪ್ಪಳ ಜಿಲ್ಲಾ ನ್ಯಾಯಾಂಗ ಇಲಾಖೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ವಕೀಲರ ಸಂಘ ಇವರ ಸಹಯೋಗದಲ್ಲಿ ನಡೆಯಿತು.

ಇದೇ ವೇಳೆ ನ್ಯಾಯಮೂರ್ತಿಗಳು,



ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ಸಸಿ ನೆಟ್ಟು ಅದಕ್ಕೆ ನೀರುಣಿಸಿದರು. ಬಳಿಕ ನ್ಯಾಯಾಲಯದ ಆವರಣ ದಲ್ಲಿರುವ ಜಿಲ್ಲಾ ಕೇಂದ್ರಿಯ ಅಭಿಲೇಖಾಲಯಕ್ಕೆ ಭೇಟಿ ನೀಡಿ, ಅಭಿಲೇಖಾಲಯದಲ್ಲಿನ ಕಡತ ಹಾಗೂ ದಾಖಲೆಗಳ ವೀಕ್ಷಣೆ ಮಾಡಿದರು.

ಈ ಸಂದರ್ಭದಲ್ಲಿ ಗೌರವಾನ್ವಿತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಸಿ.ಚಂದ್ರಶೇಖರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಾದ ಡಾ.ಟಿ. ಲಿಂಗರಾಜು, ಕೊಪ್ಪಳ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರಾದ ಎ.ವಿ.ಕಣವಿ, ಕರ್ನಾಟಕ ರಾಜ್ಯ ವಕೀಲರ ಪರಿಷತ್ ಸದಸ್ಯರಾದ ಎಸ್.ಆಸೀಫ್ ಅಲಿ, ರಾಜ್ಯ ವಕೀಲರ ಪರಿಷತ್ ಮಾಜಿ ಸದಸ್ಯರು ಹಾಗೂ ಕರ್ನಾಟಕ ಮಹಿಳಾ ವಕೀಲರ ಒಕ್ಕೂಟದ ಅಧ್ಯಕ್ಷರಾದ ಸಂಧ್ಯಾ ಬಿ ಮಾದಿನೂರು, ಗೌರವಾನ್ವಿತ ಪ್ರಧಾನ ಜಿಲ್ಲಾ ಕೌಟುಂಬಿಕ ನ್ಯಾಯಾಧೀಶರಾದ ಸರಸ್ವತಿದೇವಿ, ಹೆಚ್ಚುವರಿ ಜಿಲ್ಲಾ ತ್ವರಿತ (ಪೊಕ್ಸೋ) ನ್ಯಾಯಾಧೀಶರಾದ ಕುಮಾರ ಡಿ.ಕೆ., ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಎಂ. ಆರ್.ಒಡೆಯರ್, ಹಿರಿಯ ಸಿವಿಲ್ ಮತ್ತು ಸಿ.ಜೆ.ಎಂ ನ್ಯಾಯಾಧೀಶರಾದ ಮಹಾಂತೇಶ ಸಂಗಪ್ಪ ದರಗದ, ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರಾದ ಭಾಗ್ಯಲಕ್ಷ್ಮೀ, ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ. ಎಫ್.ಸಿ ನ್ಯಾಯಾಧೀಶರಾದ ಆದಿತ್ಯಕುಮಾರ್ ಹೆಚ್.ಆರ್., ಸೇರಿ ದಂತೆ ಜಿಲ್ಲಾ ವಕೀಲರ ಸಂಘದ ಪದಾಧಿಕಾರಿಗಳು ಮತ್ತು ಸರ್ವ ಸದಸ್ಯರು ಕಾರ್ಯಕ್ರಮದಲ್ಲಿ ಉಪಸ್ಥಿತರು ಇದ್ದರು.

# ಬಾಲ ಭವನ ನಿರ್ಮಾಣಕ್ಕೆ ಸ್ಥಳ ಪರಿಶೀಲಿನೆ: ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್



■ **ಹಂಪಿ ಟೈಮ್ಸ್ ಬಳ್ಳಾರಿ**

ನಗರದ ಸ್ತ್ರೀ ಸೇವಾ ನಿಕೇತನ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಳೆಯ ಉಪನಿರ್ದೇಶಕರ ಕಚೇರಿಯ ಆವರಣದಲ್ಲಿ ಖಾಲಿ ಇರುವ 12 ಎಕರೆ ವಿಸ್ತೀರ್ಣದ ಜಾಗದಲ್ಲಿ ನೂತನ ಬಾಲ ಭವನ ನಿರ್ಮಾಣ ಸಂಬಂಧ ಶನಿವಾರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಅವರು ಸ್ಥಳ ಪರಿಶೀಲನೆ ನಡೆಸಿದರು.

ಇದೇ ಜಾಗದಲ್ಲಿ ಬಾಲ ಭವನದ ಜೊತೆಗೆ ವಾಣಿಜ್ಯ ಮಳಿಗೆಗಳು, ಮಹಿಳೆಯರಿಗಾಗಿ ಟೆನ್ನಿಸ್ ಕೋರ್ಟ್, ಈಜುಕೊಳ ನಿರ್ಮಾಣ ಮಾಡಬೇಕೆಂದು ಸ್ಥಳದಲ್ಲಿದ್ದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳಿಗೆ ಸಚಿವರು ಸೂಚಿಸಿದರು.

ಬಾಲ ಭವನ ಮತ್ತಿತರ ಕಟ್ಟಡ ನಿರ್ಮಾಣ ನಿರ್ಮಾಣಕ್ಕಾಗಿ ಮಿಷನ್ ಶಕ್ತಿ ಯೋಜನೆಯಡಿ ಅನುದಾನ ಸದ್ಬಳಕೆ ಮಾಡಿಕೊಳ್ಳಬೇಕೆಂದು ಸಚಿವರು ಅಧಿಕಾರಿಗಳಿಗೆ ನಿರ್ದೇಶಿಸಿದರು.

ಈ ವೇಳೆ ಶಾಸಕ ನಾರಾ ಭರತರೆಡ್ಡಿ, ಬುಡಾ ಅಧ್ಯಕ್ಷ ಜೆ ಸಿ ಆಂಜನೇಯಲು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಂಟಿ ನಿರ್ದೇಶಕ ಬಿ.ಎಚ್. ನಿಶ್ಚಲ್, ಬಳ್ಳಾರಿ ಜಿಲ್ಲಾ ಉಪನಿರ್ದೇಶಕ ವಿಜಯ್‌ಕುಮಾರ್ ಮತ್ತಿತರರು ಹಾಜರಿದ್ದರು.

## ಕವಿ ಮನಸು

### ತುಂತುರು ಮಳೆ

ಎಲ್ಲೆಲ್ಲೂ ತುಂತುರು ಮಳೆ
ತಂಪಾಗಿ ಇರುವಳು ಇಳೆ
ತಂದಿತು ಇಳೆಯಲಿ ಕಳೆ
ಸಮೃದ್ಧಿ ಆಗುವುದು ಬೆಳೆ

ರೈತರಿಗೆ ಹರುಷದ ಹೊಳೆ
ಕಿತ್ತೊಗೆಯುವ ಜಾಡ್ಯದ ಕೊಳೆ
ಕೋಗಿಲೆ ಗಾನದ ಇಂಪು
ಪಸರಿಸುವುದು ಎಲ್ಲೆಡೆ ಕಂಪು

ಎಲ್ಲೆಲ್ಲೂ ಹಚ್ಚ ಹಸಿರು
ಅದುವೇ ನಮ್ಮ ಉಸಿರು
ಗಿಡಮರಗಳಲಿ ಹೊಸತನದ ಚಿಗುರು

ಭೋರ್ಗರೆಯುತ ಸುರಿಯಲಿ
ಮುಂಗಾರು
ಜತೆಯ ಬಿಡದಿರಲಿ ಹಿಂಗಾರು
ಕಾಲಕಾಲಕ್ಕೆ ಬರಲಿ ವರ್ಷಧಾರೆ
ಜೀವನಕ್ಕೆ ಅದೇ ಅಮೃತಧಾರೆ

– ಚೇತನ ಭಾರ್ಗವ ಬೆಂಗಳೂರು

### ತಿಳಿಯದು

ಯಾರ ಕೈಯಲಿ ಏನಿದೆ ಸ್ವಾಮಿ
ಎಲ್ಲದು ಅವನ ಲೇಲೆಯೂ.
ಆಸೆ ಎಂಬ ಕೋಶಕೆ ಸಿಲುಕಿ
ಏನು ತಿಳಿಯದೆ ಮಾಡಿಹ ನು.॥1॥

ಹೂವಿನ ಗಿಡದಲ್ಲಿ ಅಂದವ ನಿಟ್ಟು
ಹೆಣ್ಣಿನಲ್ಲಿ ಚಂದವ ಕೊಟ್ಟು .
ಗಂಡಸರೇ ಅದರ ಗುಲಾಮ
ನಡೆದಿದೆ ಸಂಸಾರ ಸಂಗ್ರಾಮ.॥2॥

ಜೀವನದಲ್ಲಿ ಏಳಿಯುವ ತೇರು
ಕಷ್ಟ ಸುಖಗಳ ಸುಂದರ ಸಾಲು.
ಅಮರ ಮಧುರ ಸಂಸಾರ
ಕಲಿಸುವ ಪಾಠ ಅನುದಿನ.॥3॥

ಒಂದೇ ದಿನದಲ್ಲಿ ಅರಳುವ ಹೂ
ಸುಗಂಧವನ್ನು ಸೂ ಸುವದು.
ಎಲ್ಲರ ಮನವನು ಜಯಸುವದು
ತನ್ನ ಹೆಸರನು ಉ ಳಿಸುವುದು.॥4॥

ನಿನ್ನಯ ಭಾವನೆ ಒಳ್ಳೆದಿರಲಿ
ನಿನ್ನ ಕೃತಿಯು ಚೆನ್ನಾಗಿರಲಿ.
ನೀತಿಯ ನುಡಿಯನು ಆಡೋ
ನಿಜಗುಣ ಶಿವಯೋಗಿ ಆಗೋ ॥5॥

– ಎಸ್ ಎಸ್ ಮುದ್ಲಾಪುರ ಕೊಪ್ಪಳ

### ಋಣಾನುಬಂಧ

ತಾಯಿ–ತಂದೆಯ ಋಣ
ಸಂಪತ್ತಿನಿಂದ ಪಾವತಿಸಲು ಆಗದಣ್ಣ.
ಗುರು–ಹಿರಿಯರ ಋಣಾನುಬಂಧ
ಎಲ್ಲವನ್ನು ಮೀರಿದ ಅನುಬಂಧ.
ಇವರುಗಳ ಋಣವನ್ನು ಸ್ಮರಿಸುವ ಗುಣ
ಇದ್ದರಷ್ಟೇ ಜೀವನ ಚೆನ್ನ.
ಇವರೆಲ್ಲರನ್ನು ತುಚ್ಛವಾಗಿ ಕಾಣುವ ಆ ಕ್ಷಣ
ನೀ ಆಗುವೆ ಭೂಮಿಯಲ್ಲಿ ತೃಣಕ್ಕೆ ಸಮಾನ.

– ಮಂಜುಶ್ರೀ ಮುರಳೀಧರ್

## ವಿಕಲಚೇತನರಿಗೆ ವಿವಿಧ ಸಲಕರಣೆ ಪಡೆಯಲು ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**


ಕುರುಗೋಡು ಪುರಸಭೆ ವತಿಯಿಂದ 2021–22ನೇ ಸಾಲಿನ ಎಸ್‌ಎಫ್‌ಸಿ ಅನುದಾನದ ಶೇ.05 ರ ಯೋಜನೆಯಡಿ ಅರ್ಹ ವಿಕಲಚೇತನರಿಗೆ ವಿವಿಧ ಸಲಕರಣೆ ನೀಡಲು ಉದ್ದೇಶಿಸಲಾಗಿದ್ದು, ಸಹಾಯಧನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಹಿಯರಿಂಗ್ ಹೆಡ್ಸ್, ಎಮ್‌ಆರ್ ಕಿಟ್ಸ್, ವೀಲ್ ಚೇರ್ ಇತ್ಯಾದಿ ಸಲಕರಣೆಗಳನ್ನು ಪಡೆಯಲು ಸಹಾಯಧನ ನೀಡಲಾಗುತಿದ್ದು, ಕುರುಗೋಡು ಪಟ್ಟಣದ ಅರ್ಹ ವಿಕಲಚೇತನರು ಜು.17 ರ ಒಳಗಾಗಿ ಅರ್ಜಿ ಸಲ್ಲಿಸಬೇಕು.

**ಬೇಕಾಗುವ ದಾಖಲೆಗಳು*** ಆಧಾರ್ ಕಾರ್ಡ್, ಮತದಾರರ ಗುರುತಿನ ಚೀಟಿ, ಪಡಿತರ ಚೀಟಿ, ಪಾಸ್‌ಪೋರ್ಟ್ ಪೋಟೊ, ಬ್ಯಾಂಕ್ ಪಾಸ್‌ಬುಕ್, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ವಿಕಲ ಚೇತನರ ಪ್ರಮಾಣ ಪತ್ರ, ಶ್ರವಣ ದೋಷವುಳ್ಳವರು ಶ್ರವಣ ದೋಷ ಪ್ರಮಾಣ ಪ್ರತಿಗಳನ್ನು ಕಚೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ದೂ.08393–263166 ಅಥವಾ ಪುರಸಭೆ ಕಾರ್ಯಾಲಯಕ್ಕೆ ಸಂಪರ್ಕಿಸಿ.

### ಸಂಗೀತ ಶಾಸ್ತ್ರದ ಪ್ರಪ್ರಥಮ ಗ್ರಂಥ

# ಹಂಪಿಯ ಶ್ರೀ ಮತಂಗಮುನಿಯ ಬೃಹದ್ದೇಶಿ



## ಹಂಪಿ ಒಳನೋಟ



ಡಾ.ರಾ.ಸ.ನಂದಕುಮಾರ ಅವರ ಕಲ್ಪನೆಯ ಶ್ರೀ ಮಾತಂಗಮುನಿ

"ಭಾರತೀಯ ಸಂಗೀತ ಶಾಸ್ತ್ರದಲ್ಲಿ ಉಪಲಬ್ಧವಾಗಿರುವ ಪ್ರಪ್ರಥಮ ಗ್ರಂಥ ಬೃಹದ್ದೇಶಿ. ಅತ್ಯಂತ ಸುಲಲಿತವಾದ, ಪಾಂಡಿತ್ಯ ಪೂರ್ಣವಾದ ನಮ್ಮ ಸಂಸ್ಕೃತಿ– ಸಂಗೀತಗಳಿಗೆ ಹೊಸ ಆಯಾಮಗಳನ್ನು ನಿರ್ಮಿಸಿದ ಬಹುಶ್ರುತವಾದ ಗ್ರಂಥವು ಹೌದು. ಅನೇಕ ಶಾಸ್ತ್ರಗಳಲ್ಲಿ ಪ್ರಗಲ್ಭ ವಿದ್ವಾಂಸನಾದ ಕನ್ನಡಿಗನೊಬ್ಬನು 1500 ವರ್ಷಗಳಷ್ಟು ಹಿಂದೆಯೇ ಇದನ್ನು ಬರೆದು ನಮ್ಮ ಸಂಗೀತದ ಲಕ್ಷ್ಯ–ಲಕ್ಷಣಗಳ ಬುನಾದಿಯನ್ನು ಸಿದ್ಧಪಡಿಸಿದನೆಂಬುದಕ್ಕಾಗಿ ಕನ್ನಡಿಗರು ಹೆಮ್ಮೆ ಪಡಬಹುದು." **ಡಾ.ರಾ.ಸತ್ಯನಾರಾಯಣ.**

"ಬೃಹದ್ದೇಶಿ" ಗ್ರಂಥವು ಭಾರತದ ಸಂಗೀತ ಶಾಸ್ತ್ರದಲ್ಲಿ ಉಪಲಬ್ಧವಾಗಿರುವ ಮೊದಲ ಗ್ರಂಥ. ಇದನ್ನು ಹಂಪಿಯ ಶ್ರೀ ಮತಂಗಮುನಿಯು ಕ್ರಿ.ಶ. 5–7ನೇಯ ಶತಮಾನದಲ್ಲಿ ರಚಿಸಿದ್ದು ಎನ್ನಲಾಗಿದೆ. ಹಂಪಿಯ ನೆಲದಲ್ಲಿ ರಚನೆಗೊಂಡ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಚರಿತ್ರೆಯು, ಮತ್ತ್ಯಾವ ನೆಲದಿಂದಲೂ ರಚನೆಗೊಂಡಿಲ್ಲ ಎನಿಸುತ್ತದೆ. ಹಂಪಿಯ ಸಾಂಸ್ಕೃತಿಕ ಚರಿತ್ರೆ ಮಾತಂಗ ಮುನಿಯ ಬೃಹದ್ದೇಶಿ ಗ್ರಂಥದಿಂದ ಪ್ರಾರಂಭಗೊಂಡು ಹರಿಹರ ರಾಘವಾಂಕರಾದಿಯಾಗಿ, ವಿಜಯನಗರ ಸಾಮ್ರಾಜ್ಯದ ಕಾಲದವರೆಗೆ ನೂರಾರು ಗ್ರಂಥಗಳು ರಚಿಸಲ್ಪಟ್ಟಿವೆ. ಈ ಧಾರ್ಮಿಕ ಸಾಹಿತ್ಯಿಕ ಸಾಂಸ್ಕೃತಿಕ ವಿಷಯಗಳನ್ನು ಒಳಗೊಂಡು ರಚಿಸಲ್ಪಟ್ಟ ಈ ನೂರಾರು ಗ್ರಂಥಗಳಲ್ಲಿ ಹಂಪಿಯಲ್ಲಿದ್ದ ಮತಂಗ ಮುನಿಯ ಬೃಹದೇಶಿ ಗ್ರಂಥವು ಮೇರು ಗ್ರಂಥವಾಗಿ ಕನ್ನಡಿಗರಿಗೆ ಅಷ್ಟೇ ಅಲ್ಲ ಭಾರತೀಯ ಸಂಗೀತ ಕ್ಷೇತ್ರದಲ್ಲಿ ಮಹತ್ವದ ಗ್ರಂಥ ಎಂದು ಪರಿಗಣಿಸಲ್ಪಟ್ಟಿದೆ. ಈ ಗ್ರಂಥ ಕುರಿತು ಒಂದಿಷ್ಟು ಮಾಹಿತಿ ಸಂಗೀತ ಪರಂಪರೆಯಲ್ಲಿ ಹಂಪಿಯ ನೆಲಕ್ಕೆ ಚಾರಿತ್ರಿಕ ಮಹತ್ವ ಇದೆ. ಕ್ರಿ.ಶ. ಐದರಿಂದ ಏಳನೇ ಶತಮಾನದ ಮತಂಗ ಮನೆಯ ಬೃಹದ್ದೇಶಿ ದೇಸಿ ಗ್ರಂಥದಿಂದ ಪ್ರಾರಂಭಗೊಂಡು, ವಿಜಯನಗರ ಸಾಮ್ರಾಜ್ಯದ ಕಾಲಘಟ್ಟದಲ್ಲಿ ಕವಿ ಕಲಾವಿದರು ಪಂಡಿತರು ಮೊದಲಾದವರಿಂದ ಸಂಗೀತದ ಕೇಂದ್ರವಾಗಿತ್ತು. ಹಂಪಿಯು ವಿಜಯವಿಠ್ಠಲ ದೇವಸ್ಥಾನ ದಲ್ಲಿ ಸಂಗೀತದ ಹೊರಹೊಮ್ಮುವ ನಾದದ ಕಂಬಗಳ ಸಂಗೀತಗಳನ್ನು ಆಲಿಸಿದಾಗ, ಸಂಗೀತಕ್ಕೆ ಎಷ್ಟು ಮಹತ್ವವನ್ನು ಅಂದಿನವರು ಕೊಟ್ಟಿದ್ದರು ಎಂಬುವುದು ಸ್ಪಷ್ಟವಾಗುತ್ತದೆ.



**ಎಂ.ಎಂ.ಶಿವಪ್ರಕಾಶ**
**ಲೇಖಕರು: ಹೊಸಪೇಟೆ**
**ಮೊ: 9449654489**
Hampi Times E-paper
SCAN AND READ

ಭಾರತದಲ್ಲಿ ಸಂಗೀತಕ್ಕೆ ಒಂದು ನಿರ್ಧಿಷ್ಟವಾದ ರೂಪವನ್ನು ಕೊಟ್ಟ ನೆಲವೆಂದರೆ ಅದು ಹಂಪಿಯೇ ಆಗಿದೆ. ಮಾತಂಗ ಮುನಿಯ ಬೃಹದ್ದೇಶಿ ಕೃತಿಯು ಭಾರತೀಯ ಸಂಗೀತ ಕ್ಷೇತ್ರಕ್ಕೆ ಕೊಟ್ಟ ಮಹತ್ವದ ಕೊಡುಗೆ. ಮುಂದೆ ವಿದ್ಯಾರಣ್ಯರ ಕಾಲದಲ್ಲಿ ವಿದ್ಯಾರಣ್ಯರ ಸಂಗೀತಸಾರದ ಗ್ರಂಥದಿಂದ ಮುಂದುವರೆದು ದಾಸ ಪರಂಪರೆ ಯವರಿಗೆ ಹಂಪಿಯ ನೆಲದ ಸಂಗೀತ ಮಹತ್ವದ್ದಾಗಿದೆ. ಪುರಂದಾಸರು ಕರ್ನಾಟಕ ಸಂಗೀತಕ್ಕೆ ಕೊಟ್ಟ ಕೊಡುಗೆ ಅಪಾರವಾದದ್ದು. ದಾಸಪರಂಪರೆ ಯಿಂದ ಈ ನೆಲದಲ್ಲಿ ಕರ್ನಾಟಕ ಸಂಗೀತ ಜನ್ಮ ತಾಳಿ, ಇದು ಈಗಲೂ ಕರ್ನಾಟಕ ಸಂಗೀತವೆಂದೆ ದಕ್ಷಿಣ ಭಾರತದಲ್ಲಿ ಪ್ರಸಿದ್ಧಿ ಪಡೆದುಕೊಂಡಿದೆ. ವಿಜಯನಗರ ಕಾಲದಲ್ಲಿ ಇದ್ದ ಸಂಗೀತ ಪಂಡಿತರು ಸ್ವರಗಳ ಚೌಕಟ್ಟು ರಾಗ ವಿಭಾಗಗಳು ಮತ್ತು ಸಂಗೀತದ ಪರಿಭಾಷೆ ಕತೆಯನ್ನು ವಿಶ್ಲೇಷಿಸಿ ಭಾರತದ ಸಂಗೀತಕ್ಕೆ ಹಾಗೂ ಕರ್ನಾಟಕದ ಸಂಗೀತಕ್ಕೆ ಮಹತ್ವದ ಕೊಡುಗೆಯನ್ನು ಕೊಟ್ಟಿದ್ದಾರೆ.

ಭರತನ ಅಮೂಲ್ಯ ನಾಟ್ಯ ಶಾಸ್ತ್ರದ ನಂತರ ರಚಿತವಾದ ಗ್ರಂಥಗಳಲ್ಲಿ ಬೃಹದ್ದೇಶಿ ಅತ್ಯಂತ ಪ್ರಮುಖವಾದ ಗ್ರಂಥವಾಗಿದೆ ಹಾಗೂ ಸಂಗೀತಶಾಸ್ತ್ರ ಗ್ರಂಥಗಳಲ್ಲಿ ಇದು ಮಹೊನ್ನತವಾದದ್ದು. ಸಂಗೀತ ಶಾಸ್ತ್ರಕ್ಕೆ ಸಂಬಂಧಿಸಿದ ಗ್ರಂಥವೆಂದರೆ ಬೃಹದ್ದೇಶಿಯೇ ಮೊದಲ ಗ್ರಂಥ, ಪ್ರಾಚೀನ ಭಾರತೀಯ ಸಂಗೀತವನ್ನು ಸಂಸ್ಕೃತದಲ್ಲಿ ನಿರೂಪಿಸುವ ಒಂದು ಶಾಸ್ತ್ರ ಗ್ರಂಥ ಎಂದಿದ್ದಾರೆ. ಬೃಹದ್ದೇಶಿ ಇದು ಸಂಸ್ಕೃತ ಶಬ್ದ ಬೃಹತ್ ಮತ್ತು ದೇಶಿ ಎಂಬುದು ಸೇರಿಯೇ ಬೃಹದ್ದೇಶಿ. ಇದು ದೇಸಿಯನ್ನು ನಿರೂಪಿಸುವ ಗ್ರಂಥವಾಗಿದೆ. ಈ ಬೃಹತ್ ದೇಸಿ ಗ್ರಂಥದ ಪ್ರಕಟಣೆಯ ಕಾರ್ಯದ ಹಿಂದೆ ರೋಚಕವಾದ ಚರಿತ್ರೆ ಇದೆ. ಬೃಹದೇಶಿಯ ಹಸ್ತ ಪ್ರತಿಗಳು? ಈ ತಿರುವನಂತಪುರದ ಸರ್ಕಾರಿ ಸಂಸ್ಕೃತ ಗ್ರಂಥ ಹಸ್ತಪ್ರತಿ ಪುಸ್ತಕದಲ್ಲಿ ಲಭ್ಯವಾಗಿದ್ದವು. ಈ ಹಸ್ತಪ್ರತಿಗಳು ಡಾ.ರಾ. ಸತ್ಯನಾರಾಯಣ ಅವರು ಗ್ರಂಥದ ಬಗ್ಗೆ ಮತ್ತು ಮಾತಂಗರ ಬಗ್ಗೆ ಸಂಶೋಧನೆ ಮಾಡಿ ವಿಶ್ಲೇಷಿಸಿ ವಿಮರ್ಶಿಸಿ ವಿವರವಾದ ಮಾಹಿತಿಯೊಂದಿಗೆ ಈ ಗ್ರಂಥವನ್ನು ಸಿದ್ಧಪಡಿಸಿಕೊಟ್ಟಿದ್ದಾರೆ. ಈ ಗ್ರಂಥದ ಶಾಸ್ತ್ರೀಯವಾದ ಪಾಠವನ್ನು ಸಿದ್ಧಪಡಿಸಿ ಅದನ್ನು ಕನ್ನಡಕ್ಕೆ ಅನುವಾದಿಸಿ ಕನ್ನಡಿಗರಿಗೆ ಈ ಗ್ರಂಥವನ್ನು ಒದಗಿಸಿ ಕೊಟ್ಟಿದ್ದಾರೆ ಡಾ.ರಾ. ಸತ್ಯನಾರಾಯಣ ಅವರು. ಅಂತರಾಷ್ಟ್ರೀಯ ಖ್ಯಾತಿಯ ಬಹುಭಾಷಾ ಪಂಡಿತರು ವಿದ್ವಾಂಸರು. ಇವರು ಕನ್ನಡ ವಿಶ್ವವಿದ್ಯಾಲಯಕ್ಕೆ 1998ರಲ್ಲಿ ಸಂಗ್ರಹಿಸಿ ಸಂಪಾದಿಸಿ ಕೊಟ್ಟಿದ್ದಾರೆ. ಈ ಗ್ರಂಥ ಕನ್ನಡದಲ್ಲಿ ಪ್ರಕಟವಾಗಬೇಕೆಂಬ ಕನಸನ್ನು ಕಂಡು ಅದನ್ನು ಕಾರ್ಯರೂಪಕ್ಕೆ ತಂದವರು ಕನ್ನಡ ವಿಶ್ವವಿದ್ಯಾಲಯದ ಸಂಸ್ಥಾಪಕ ಕುಲಪತಿಗಳಾಗಿದ್ದ ಡಾ. ಚಂದ್ರಶೇಖರ್ ಕಂಬಾರ ಅವರು. ಅವರ ಆಸೆ ಕನಸಿನಂತೆ ಸತ್ಯನಾರಾಯಣ ಅವರು ಈ ಪುಸ್ತಕವನ್ನು ದೊಡ್ಡ ಶ್ರಮವಹಿಸಿ ತಮ್ಮ ವಿದ್ವತ್ ಪರಂಪರೆಯಿಂದ ಈ ಗ್ರಂಥವನ್ನು ನಮ್ಮ ತಲಮಾರಿನ ಜನರಿಗೆ ಲಭ್ಯವಾಗುವಂತೆ ಮಾಡಿದ್ದಾರೆ. ಇವರ ಕಾರ್ಯ ಅತ್ಯಂತ ಚಾರಿತ್ರಿಕವಾದದ್ದಾಗಿದೆ ಈ ಪುಸ್ತಕವು ಪುನರ್ ಮುದ್ರಣ ಕಂಡಿದ್ದು ಪರಿಷ್ಕೃತ ಆವೃತ್ತಿಯ ಸಂಪಾದಕರಾಗಿ ಡಾ.ರಾ.ಸ.ನಂದಕುಮಾರ ಹಾಗೂ ಸಹ ಸಂಪಾದಕ ಎಸ್.ಕಾರ್ತಿಕ್. ಈಗ ಇಂಗ್ಲಿಷ್ ಹಿಂದಿ ಭಾಷೆಗೂ ಅನುವಾದ ಗೊಳ್ಳುತ್ತಿದೆ. ಇದಕ್ಕಾಗಿ ವಿದ್ವಾಂಸರ ಒಂದು ಪಡೆ ನಿರಂತರವಾಗಿ ಕಾರ್ಯವನ್ನು ನಿರ್ವಹಿಸುತ್ತಿದೆ. ಈ ಬೃಹತ್ ದೇಸಿಯನ್ನು ಓದಿ ಅರ್ಥಮಾಡಿಕೊಳ್ಳುವುದು ಅರ್ಥ ಸುಲಭದ ಕಾರ್ಯವಲ್ಲ ಸಂಗೀತದ ಜ್ಞಾನ ಅಧ್ಯಯನ ಇದ್ದವರು ಈ ಗ್ರಂಥವನ್ನು ಓದಲು ಸಾಧ್ಯವಾಗುತ್ತದೆ.

" ಬೃಹದ್ದೇಶೀ ಗ್ರಂಥ ಕರ್ತೃ ಮತಂಗಮುನಿಯದು ಬಹುಮುಖ ಪ್ರತಿಭೆಯ ವ್ಯಕ್ತಿತ್ವ. ಇಂತಹ ವ್ಯಕ್ತಿತ್ವದ ಬೆಳವಣಿಗೆಯು ಪ್ರಾಚೀನ ಭಾರತೀಯ ಸಂಸ್ಕೃತಿಗಳಲ್ಲಿ ಒಂದು. ಜೀವನವನ್ನು ಸಮಗ್ರವಾಗ ದರ್ಶಿಸಿ ಅಂತಹ ದರ್ಶನವನ್ನು ಸಾಮರಸ್ಯದ ಆಧಾರದ ಮೇಲೆ ರೂಪಿಸಿಕೊಂಡ ಮಹಾನ್ ವ್ಯಕ್ತಿಗಳಲ್ಲಿ ಮತಂಗನು ಒಬ್ಬ. ಅವನು ಭರತ, ಕಾಶ್ಯಪ್ಪ, ಕೋಹಲ, ಯಾಷ್ಟಿಕ ದುರ್ಗಾ ಶಕ್ತಿ, ಶಾರ್ದೂಲ, ನಾರದ, ನಂದಿಕೇಶ್ವರ, ದತ್ತಿನಿಧಿ, ತುಂಬರು, ಅಭಿನವ ಗುಪ್ತ, ಇವರ ಸಾಲಿನಲ್ಲಿ ನಿಲ್ಲುವ ತೇಜೋಮಯ ಮೂರ್ತಿ. ಹೀಗೆ ಅವನು ಸಂಗೀತದ ತ್ರಿಮುಖಗಳಾದ ಗೀತ, ವಾದ್ಯ ಮತ್ತು ನರ್ತನಗಳಲ್ಲಿ ಸಮಾನ ಪಾಂಡಿತ್ಯವನ್ನು ಪಡೆದಿದ್ದವನು. ಅವನು ವೇದಪ್ರಾಮಾಣ್ಯವನ್ನು ವೇದ ಪಾರಮ್ಯವನ್ನು ವೇದಾಂಗಗಳನ್ನು ಒಪ್ಪಿಕೊಂಡ ಸನಾತನಿ. ಆಸ್ತಿಕ ಉಪನಿಷತ್ತಿನ ಮಹಾ ವಾಕ್ಯಗಳನ್ನು ಅರಿತವನು. ಗಾಂಧರ್ವ ಶಾಸ್ತ್ರಕ್ಕೆ ವೇದೋಪವಸತಿಯನ್ನು ಕಲ್ಪಿಸಿದವನು. ಸಾಮವೇದವು ಸಂಗೀತಕ್ಕೆ ಅಧಿಷ್ಟಾನವೆಂದು ಪ್ರತಿಪಾದಿಸಿದವ. ಅದು ಗೀತ ಪ್ರಧಾನವೆಂಬುದನ್ನು ಉದಾಹರಿಸಿದವನು. ವೇದ ಮಂತ್ರಗಳನ್ನು ಗೀತಕ್ಕೆ ಅಳವಡಿಸಿದಾಗ ಪದ ವಿಚ್ಛೇದದಿಂದ ಅರ್ಥ ಭಂಗವಾದರೆ ದೋಷವಿಲ್ಲ ಎಂದು ಸಂಗೀತ ಪ್ರಯೋಗದಲ್ಲಿ ಪ್ರಸಿದ್ಧವಾಗಿರುವ ರೂಢಿಯನ್ನು ವೇದ ಪಾಠದ ಮೂಲಕ ಒಯ್ದವನು" ಎಂದಿದ್ದಾರೆ ಡಾ. ಸತ್ಯನಾರಾಯಣ ಅವರು.

ಶ್ರೀ ಮಾತಂಗ ಮುನಿ ವಿರಚಿತ ಬೃಹದ್ದೇಶಿ ಗ್ರಂಥವು ಮೂಲ ಸಂಸ್ಕೃತದಲ್ಲಿದ್ದು ಸಂಗೀತಶಾಸ್ತ್ರಕ್ಕೆ ನೀಡಿರುವ ಕೊಡುಗೆಯಲ್ಲಿ ಈ ಗ್ರಂಥವು ಪ್ರಮುಖವಾಗಿದೆ. ದೇಸಿ–ಮಾರ್ಗ, ನಾದ, ಶೃತಿ, ಸ್ವರ, ಗೀತೆ, ರಾಗ, ವರ್ಣ, ಗೀತ, ರಾಗ ಮೊದಲಾದ ಸಂಗೀತಶಾಸ್ತ್ರದ ಬಹುಮುಖ್ಯ ಆಯಾಮಗಳನ್ನು ನಿರೂಪಿಸಿರುವ ಕೃತಿಯಾಗಿದೆ. ಈ ಕೃತಿಯನ್ನು ಸಂಸ್ಕೃತದಿಂದ ಕನ್ನಡಕ್ಕೆ ತಂದು ಇದು ಕನ್ನಡದ ಮಾತಂಗ ಪರ್ವತ ವಿರೂಪಾಕ್ಷ ಬೀದಿಯ ಎದುರು ಬಸವ ಮಂಟಪ ದಲ್ಲಿ ಇರುವುದೇ ಮಾತಂಗ ಪರ್ವತ. ಪರ್ವತದ ಮೇಲೆ ಮತಂಗಮನಿ ತಪಸ್ಸು ಮಾಡಿದ್ದನು ಎನ್ನುವ ಐತಿಹ್ಯವಿದೆ ಈ ಪರ್ವತದ ಮೇಲೆ ವೀರಭದ್ರನ ದೇವಸ್ಥಾನವಿದೆ. ಇದು ಈಗ ಅತ್ಯಂತ ಎತ್ತರದ ಪರ್ವತಗಳಲ್ಲಿ ಪ್ರಮುಖವಾಗಿದೆ ಈ ಪರ್ವತದ ಮೇಲೆ ನಿಂತು ಇಡೀ ಹಂಪಿಯ ಪ್ರದೇಶವನ್ನು ವೀಕ್ಷಿಸಬಹುದಾಗಿದೆ. ಇದನ್ನು ಮಾತಂಗ ಅಥವಾ ಮಾತಂಗ ಪರ್ವತ ಎಂದು ಕರೆಯಲಾಗುತ್ತದೆ. (ಮಾಹಿತಿ ಹಾಗೂ ಚಿತ್ರ ಕೃಪೆ ಬೃಹದ್ದೇಶಿ ಗ್ರಂಥ ದಿಂದ)

# ರಾತ್ರಿ ರಾಜ ರೈತರ ಬೆಳೆ ರಕ್ಷಕ ಗೂಬೆ

ಗೂಬೆಗಳು!! ಎಂದರೆ ಸಾಮಾನ್ಯವಾಗಿ ಹಲವರಿಗೆ ಭಯಾನಕ ಒಂಟಿ ರಾತ್ರಿ ಗಳು, ಭಯ ಮಿಶ್ರಿತ ಕೀರಲು ಧ್ವನಿಗಳು ನೆನಪಾಗುವುದೇ ಹೆಚ್ಚು... ಗೂಬೆ ಗಳು ಅನಾದಿ ಕಾಲದಿಂದಲೂ ಸಹ ತಮ್ಮ ನಿಗೂಢ ಸ್ವಭಾವ, ಆಕರ್ಷಕ ಮುಖಭಾವ, ವಿಶಿಷ್ಟ ಬಗೆಯ ಕೂಗುಗಳಿಂದ ನಮ್ಮ ಅನೇಕ ದಂತ ಕತೆಗಳಲ್ಲಿಯೂ ಹಾಗೂ ಪೌರಾಣಿಕ ಕಥೆಗಳಲ್ಲಿ ಮತ್ತು ಸಾಂಸ್ಕೃತಿಕ ವಾಗಿಯೂ ಪ್ರಚಲಿತ ದಲ್ಲಿದ್ದು ತಮ್ಮದೇ ಆದ ಮಹತ್ವವನ್ನು ಪಡೆದಿವೆ..

ಪುರಾತನ ಗ್ರೀಸ್ ನಲ್ಲಿಯೂ ಗೂಬೆ ಗಳು ವಿವೇಕ ಮತ್ತು ಜ್ಞಾನದ ಸಂಕೇತವಾಗಿವೆ. ಮತ್ತು ಪೌರಾಣಿಕವಾಗಿಯೂ ಸಹ ಲಕ್ಷ್ಮಿದೇವತೆಯ ವಾಹನವೆಂದು ಹೇಳಲ್ಪಟ್ಟಿದೆ..

ದಕ್ಷಿಣ ಧ್ರುವ ಮತ್ತು ಗ್ರೀನ್‌ಲ್ಯಾಂಡ್ ನಂತಹ ಪ್ರದೇಶಗಳನ್ನು ಬಿಟ್ಟು ಭೂಮಿಯ ಎಲ್ಲಾ ಕಡೆಗೂಬೆ ಗಳು ವಾಸಿಸುತ್ತವೆ.. ವಿಶ್ವದಾದ್ಯಂತ 230 ಪ್ರಬೇದದ, ಭಾರತದಲ್ಲಿ 36 ಜಾತಿಯ ಹಾಗೂ ಕರ್ನಾಟಕದಲ್ಲಿ 15 ಜಾತಿಯ ಗೂಬೆಗಳು ಕಾಣ ಸಿಗುತ್ತವೆ.. ಗೂಬೆಗಳು ದೊಡ್ಡ ಕಲ್ಲು ಬಂಡೆಗಳ ಮರೆಯಲ್ಲಿ, ದೊಡ್ಡ ಮರಗಳಲ್ಲಿ, ಹೊಲ–ಗದ್ದೆ–ಹುಲ್ಲುಗಾವಲುಗಳ ಸಮೀಪದಲ್ಲಿ ಮರದ ಹಾಗೂ ಗೋಡೆಗಳ ಪೊಟರೆ ಗಳಲ್ಲಿ, ಕಡಿದಾದ ನದಿ, ಕಾಲುವೆಗಳ ಸಮೀಪದಲ್ಲಿ, ಪಾಳುಬಿದ್ದ ಕಟ್ಟಡಗಳು–ಕೋಟೆ ಪ್ರದೇಶಗಳಲ್ಲಿ, ಸಾಮಾನ್ಯವಾಗಿ ವಾಸಿಸುತ್ತವೆ.



**ನಾಗರಾಜ ಕಂಬಾಳಿ ಮಠ**
**ವಲಯ ಅರಣ್ಯಾಧಿಕಾರಿ ಹೊಸಪೇಟೆ**
Hampi Times E-paper
SCAN AND READ



ಗೂಬೆಗಳು ತಮ್ಮ ಉಳಿವಿಗಾಗಿ ಹಲವು ಬಗೆಯ ತಮ್ಮದೇ ವಿಶಿಷ್ಟವಾದ ದೈಹಿಕ ಮಾರ್ಪಡುಗಳನ್ನು ಹೊಂದಿವೆ. ಅವುಗಳಲ್ಲಿ ಮುಖ್ಯವಾಗಿ ಹಾರುವಾಗ ಯಾವುದೇ ರೀತಿಯ ಶಬ್ದವಾಗದಂತೆ ಅಗಲವಾದ ರೆಕ್ಕೆಗಳು ಮತ್ತು ರೆಕ್ಕೆಯ ಅಂಚಿನಲ್ಲಿರುವ ಪುಕ್ಕಗಳು ಬಹಳ ಮೆದುವಾಗಿರುವುದರಿಂದ ಹಾರುವ ಶಬ್ದಕಂಪನವನ್ನುಸ್ತಬ್ದಗೊಳಿಸುತ್ತವೆ.. ಇದು ಗೂಬೆಗಳಿಗೆ ತಮ್ಮ ಬೇಟೆಗೆ ಯಾವುದೇ ಅಪಾಯದ ಸುಳಿವು ನೀಡದಂತೆ ಬೇಟೆಯಾಡಲು ಉಪಯುಕ್ತ ವಾಗಿದೆ.. ರಾತ್ರಿಯ ರಾಜನೆಂದು ಕರೆಸಿಕೊಳ್ಳುವ ಗೂಬೆಗಳು ರಾತ್ರಿ ಸಮಯದಲ್ಲಿ ಸಾಮಾನ್ಯವಾಗಿ ಬೇಟೆ ಯಾಡುವುದರಿಂದ ಅತೀ ಸೂಕ್ಷ್ಮ ಶಬ್ದವನ್ನು ಗ್ರಹಿಸುವ ಕಿವಿಗಳು ಮತ್ತು ತೀಕ್ಷ್ಣ ದೃಷ್ಟಿ ಸಾಮರ್ಥ್ಯವನ್ನು ಹೊಂದಿವೆ. ಮತ್ತು ಗೂಬೆಗಳು ಸುತ್ತಮುತ್ತ ಗಮನಿಸಲು ತಮ್ಮ ಇಡೀ ಕತ್ತನ್ನೇ 270 ಡಿಗ್ರಿ ವರೆಗೆ ತಿರುಗಿಸಲು ಕತ್ತಿನ ಮೂಳೆ ಗಳು ಮಾರ್ಪಡನ್ನು ಹೊಂದಿವೆ..

ಗೂಬೆಗಳ ಸಾಮಾನ್ಯವಾಗಿ ಬಲಿಷ್ಠವಾದ ಗಿಡ್ಡ ಕಾಲುಗಳು ಹೊಂದಿದ್ದು ಮೂರು ಕಾಲ್ಬೆರಳುಗಳ ಮೊನಾಚಾದ ಉಗುರುಗಳು ಮುಂದಕ್ಕೆ ಚಾಚಿದ್ದು, ಒಂದು ಹಿಂದಕ್ಕೆ ತಿರುಗಿರುತ್ತದೆ ಇವು ತನ್ನ ಬೇಟೆ ಬಿಗಿಯಾಗಿ ಧೃಢವಾಗಿ ಹಿಡಿಯಲು ಸಹಾಯಕವಾಗಿವೆ.

ಗೂಬೆಗಳು ತಮ್ಮ ಬೇಟೆಯು ಸಣ್ಣದಿದ್ದರೆ ಇಡಿಯಾಗಿಯೇ ನುಂಗುತ್ತವೆ ಅಥವಾ ದೊಡ್ಡದಿದ್ದರೆ ಅದನ್ನು ತುಂಡರಿಸಿ ತಿಂದು ದೇಹದಲ್ಲಿ ಕರಗದ ಬಾಗಗಳನ್ನು ಕಕ್ಕುವ ಮೂಲಕ ಹೊರಗೆ ಹಾಕುತ್ತವೆ.

ಗೂಬೆಗಳು ಜಮೀನುಗಳಲ್ಲಿ ಫಸಲಿನ ಸಮಯಕ್ಕೆ ಸಂತಾನಾಭಿವೃದ್ಧಿ ಅತ್ಯದಿಕ ಸಂಖ್ಯೆಯಲ್ಲಿ ಮಾಡುವ ಅಸಂಖ್ಯಾತ ದಂಶಕಗಳನ್ನು ಬಕ್ಷಿಸಿ ಅವುಗಳ ಸಂಖ್ಯೆ ನೈಸರ್ಗಿಕವಾಗಿ ನಿಯಂತ್ರಿಸುವಲ್ಲಿ ಅತ್ಯಂತ ಪ್ರಮುಖ ಪಾತ್ರವಹಿಸುತ್ತವೆ ಮತ್ತು ಇತರೆ ಕೀಟಗಳು, ಜೀವಿಗಳು ಹಾಗೂ ಸಣ್ಣ ಪಕ್ಷಿಗಳನ್ನೂ ತಿನ್ನುವ ಮೂಲಕ ಅವುಗಳ ಸಂಖ್ಯೆಯನ್ನು ನಿಯಂತ್ರಿಸಿ ಇದರಿಂದ ರೈತರಿಗೆ ಹೆಚ್ಚಿನ ಬೆಳೆ ದೊರೆಯಲು ಸಹಾಯಕವಾಗಿರುವುದಲ್ಲದೇ, ನೈಸರ್ಗಿಕ ಸಮತೋಲನ ಕಾಯ್ದುಕೊಳ್ಳುವಿಕೆಯಲ್ಲಿಯೂ ಸಹ ತಮ್ಮ ಮಹತ್ವದ ಪಾತ್ರವನ್ನು ನಿರ್ವಹಿಸುತ್ತವೆ..

ಗೂಬೆಗಳೂ ಸಹ ಇತರ ಬೇಟೆಗಾರ ಪಕ್ಷಿಗಳಿಗೆ ಬೇಟೆ ಆಗುವುದನ್ನು ತಪ್ಪಿಸಿಕೊಳ್ಳಲು ತಮ್ಮ ದೇಹದ ಬಣ್ಣವು ಬಂಡೆಯನ್ನು ಅಥವ ಮರದ ಹಿನ್ನೆಲೆಯ ಬಣ್ಣವನ್ನು ಹೋಲುವ ಮತ್ತು ಮರದ ರೆಂಬೆ ಕೊಂಬೆಗಳ ಒಳಗೆ ಅಡಗಿ ತನ್ನ ಸುಳಿವೇ ಸಿಗದಂತೆ ಛದ್ಮ ವೇಷಧಾರಿ ( camouflage) ಆಗಿ ಕುಳಿತಿರುತ್ತವೆ.

ಹಗಲಿನ ಸಮಯದಲ್ಲಿ ಕಾಣಸಿಗುವ ಗೂಬೆಗಳಿಗೆ ಇತರ ಪಕ್ಷಿಗಳು ಗುಂಪು ಗುಂಪಾಗಿ ದಾಳಿ ಮಾಡಲು ಪ್ರಯತ್ನಿಸಿ ಅವನ್ನು ದೂರಕ್ಕೆ ಹಾರಿ ಹೋಗುವಂತೆ ದಾಳಿ ಮಾಡಲು ಪ್ರಯತ್ನಿಸಿದರೂ ಸಹ ಗೂಬೆಗಳು ಪ್ರತಿದಾಳಿಗೆ ಪ್ರಯತ್ನಿಸದೇ ಶಾಂತ ಸ್ವಭಾವದಲ್ಲಿಯೇ ಇದ್ದು ತಮ್ಮ ಪಾಡಿಗೆ ತಾವು ಹಾರುತ್ತವೆ.



ಮನುಷ್ಯನು ತನ್ನ ವಿಪರೀತವಾದ ಹಾಗೂ ಮಿತಿಯೇ ಇಲ್ಲದ ದುರಾಸೆಗಳಿಂದ ಹಾಗೂ ಕೇವಲ ತನಗಾಗಿ ಮಾತ್ರವೇ ಪ್ರಕೃತಿ ಎಂಬ ಸ್ವಾರ್ಥ ಬುದ್ದಿಯಿಂದ ಗೂಬೆಗಳ ಆವಾಸ ಸ್ಥಾನಗಳನ್ನು ನಾಶ ಪಡಿಸುತ್ತಿರುವುದಲ್ಲದೇ, ವ್ಯವಸಾಯದಲ್ಲಿ ಬೆಳೆಗಳಿಗೆ ವಿಪರೀತವಾದ ರಸಾಯನಿಕ ಕ್ರಿಮಿನಾಶಕಗಳ ಬಳಕೆಯಿಂದ ಗೂಬೆಗಳ ಸಂತತಿಯು ಕಡಿಮೆಯಾಗುತ್ತಿದೆ.

ಗೂಬೆಗಳ ಕುರಿತ ವಿಕೃತವಾದ ಹಾಗೂ ವಿವೇಚನಾರಹಿತವಾದ ಅದೆಷ್ಟೋ ಹೇಯವಾದ ಮೂಢನಂಬಿಕೆಗಳಿಂದ ಗೂಬೆಗಳನ್ನು ಹಿಡಿದು, ಬಂದನದಲ್ಲಿರಿಸುವುದು ಮತ್ತು ಅವನ್ನು ಹಿಂಸಿಸುವುದು ವನ್ಯಜೀವಿ ಸಂರಕ್ಷಣಾ ಕಾಯ್ದೆ 1972 ರ ಪ್ರಕಾರ ಶಿಕ್ಷಾರ್ಹ ಅಪರಾಧವಾಗಿದೆ..

ತಿಳಿದಷ್ಟು ಮುಗಿಯದ ಅತ್ಯಂತ ವಿಸ್ಮಯಕಾರಿ ಕೌತುಕದ ಜೀವಿಗಳಾಗಿರುವ ಗೂಬೆಗಳು ಈ ಭೂಮಿಯ ಮೇಲೆ ಮನುಷ್ಯ ಜನ್ಮ ತಾಳುವ ಹತ್ತು ಹಲವು ಮಿಲಿಯನ್ ವರ್ಷಗಳ ಮೊದಲೇ ಜೀವಿಸುತ್ತಾ ಬಂದಿರುವ ಅವನ್ನು ನಾವೆಲ್ಲರೂ ಗೌರವಿಸಿ ಮತ್ತು ಅವುಗಳ ಆವಾಸ ಸ್ಥಾನಗಳನ್ನು ಸಂರಕ್ಷಣೆ ಮಾಡಬೇಕಿದೆ..

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಆಷಾಡ । ಸಂವತ್ಸರ: ಕ್ರೋಧಿ

07–07–2024 – ಭಾನುವಾರ

| | |
|---|---|
| ತಿಥಿ | : ದ್ವಿತೀಯ |
| ಪಕ್ಷ | : ಶುಕ್ಲ |
| ನಕ್ಷತ್ರ | : ಪುಷ್ಯ |
| ಯೋಗ | : ಹರ್ಷಣ |
| ಕರಣ | : ಬಾಳವ |
| ಸೂರ್ಯೋದಯ | : 05:48:18 |
| ಸೂರ್ಯಾಸ್ತ | : 19:15:30 |
| ರಾಹು | : 17:35–19:16 |
| ಯಮಘಂಡ | : 12:32–14:13 |
| ಗುಳಿಕ | : 15:54–17:35 |

## ತುಂಗಭದ್ರಾ ನೀರಿನ ಮಟ್ಟ



ಶನಿವಾರ : 06–07–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1593.19 ಅಡಿ |
| ಒಳ ಹರಿವು | 25556 ಕ್ಯುಸೆಕ್ |
| ಹೊರ ಹರಿವು | 190 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 13.901 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1576.71 ಅಡಿ |
| ಒಳ ಹರಿವು | 193 ಕ್ಯುಸೆಕ್ |
| ಹೊರ ಹರಿವು | 77 ಕ್ಯುಸೆಕ್ |
| ಸಾಮರ್ಥ್ಯ | 3.078 ಟಿಎಂಸಿ |

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಚಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
Only Admins can Send Messages to this Group
Join for to Get Daily E-paper

# ಪರಿಹಾರ ಕಲ್ಪಿಸಿ ಇಲ್ಲವೇ ಹಿಂಬರಹ ಕೊಡಿ

## ಅರ್ಜಿದಾರರನ್ನು ಅಲೆದಾಡಿಸಬಾರದು । ಅಧಿಕಾರಿಗಳು ಸಾರ್ವಜನಿಕರೊಂದಿಗೆ ಸೌಜನ್ಯದಿಂದ ವರ್ತಿಸಿ
## ಜನಸಂಪರ್ಕ ಸಭೆಯಲ್ಲಿ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅಧಿಕಾರಿಗಳಿಗೆ ಖಡಕ್ ನಿರ್ದೇಶನ

■ **ಹಂಪಿ ಟೈಮ್ಸ್ ಹರಪನಹಳ್ಳಿ**

ಯಾವುದೇ ಅರ್ಜಿಗಳ ಬಗ್ಗೆ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಬಾರದು. ಕಾನೂನಿನಲ್ಲಿ ಅವಕಾಶವಿದ್ದರೆ ಕೂಡಲೇ ಅರ್ಜಿ ಪರಿಶೀಲಿಸಿ ಕ್ರಮ ವಹಿಸಬೇಕು. ಇಲ್ಲದಿದ್ದಲ್ಲಿ ವಿಳಂಬ ಮಾಡದೇ ಹಿಂಬರಹ ನೀಡಬೇಕು ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ತಾಲೂಕು ಹರಪನಹಳ್ಳಿಯಲ್ಲಿ ಶನಿವಾರ ಹಮ್ಮಿಕೊಂಡಿದ್ದ ಜನಸ್ಪಂದನ ಕಾರ್ಯಕ್ರಮದಲ್ಲಿ ಜನರಿಂದ ಅಹವಾಲು ಸ್ವೀಕರಿಸಿ ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದರು.

ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿ ಅಹವಾಲು ಸಲ್ಲಿಸಿದ್ದು ವಿಶೇಷವಾಗಿತ್ತು. ರೈತ, ಕಾರ್ಮಿಕ, ಕೃಷಿ ಕೂಲಿಕಾರ್ಮಿಕ ಸಂಘಟನೆಗಳ ಮುಖಂಡರು ಸಹ ಆಗಮಿಸಿ ಮನವಿ ಸಲ್ಲಿಸಿದರು.

ಹಳ್ಳಿಕೇರಿ, ಮಾದಿಹಳ್ಳಿ, ಗೌರಿಪುರ ತೊಗರಿಕಟ್ಟಿ, ಜಿಟ್ಟಿನಕಟ್ಟಿ, ಯರಬಾಳು, ತಾವರಗೊಂದಿ, ಅರಸನಾಳು, ಹಲುವಾ ಗಲು, ಗರ್ಭಗುಡಿ, ಬಿಕ್ಕಿಕಟ್ಟಿ ಗ್ರಾಮದಲ್ಲಿನ ಫಲಾನುಭವಿ ಗಳಿಗೆ ನಿವೇಶನ ನೀಡಬೇಕು, ನಿವೇಶಕ್ಕೆ ಸರ್ಕಾರಿ ಜಮೀನು ಹುಡುಕಿಕೊಡಬೇಕು. ಜಾಗವಿರುವ ಕಡೆಗೆ ನಿವೇಶನ ಹಂಚಿಕೆ ಮಾಡಬೇಕು ಎಂದು ಆಯಾ ಗ್ರಾಮಸ್ಥರು ಜನಸ್ಪಂದನ ಕಾರ್ಯಕ್ರಮದ ಸ್ಥಳಕ್ಕೆ ಆಗಮಿಸಿ ಭಾಗ್ಯ, ಶ್ರುತಿ ಅವರ ನೇತೃತ್ವದಲ್ಲಿ ಮನವಿ ಸಲ್ಲಿಸಿದರು.

ಅರಸಿಕೇರೆಯಲ್ಲಿ ನಾಡಕಚೇರಿ ನಿರ್ಮಿಸಬೇಕು. ಬಸ್ ಸೌಕರ್ಯ ಕಲ್ಪಿಸಬೇಕು. ಆಸ್ಪತ್ರೆಗೆ ವೈದ್ಯಾಧಿಕಾರಿಗಳನ್ನು ನೇಮಿಸಬೇಕು. ನಿರಂತರ ಜ್ಯೋತಿ ಸಮಸ್ಯೆ ಸರಿಪಡಿಸಬೇಕು ಎಂದು ಅರಸಿಕೆರೆ ಗ್ರಾಮದ ರೈತ ಮುಖಂಡರಾದ ಹೆಚ್ ಹಾಲಪ್ಪ, ಎಬಿ ನಾಗರಾಜಗೌಡ ಅವರು ಗ್ರಾಮಸ್ಥರೊಂದಿಗೆ ಕಾರ್ಯಕ್ರಮದ ಸ್ಥಳಕ್ಕೆ ಆಗಮಿಸಿ ಮನವಿ ಸಲ್ಲಿಸಿದರು. ಚಿಗಟೇರಿ ಮಹಿಳಾ ಸರ್ಕಾರಿ ಪಿಯು ಕಾಲೇಜ್ ಬಳಿ ಗಾಜಿನ ಬಾಟಲಿ ಬೀಸಾಕಿ ಹೋಗುವಷ್ಟು ಕೆಟ್ಟು ಹೋಗಿರುವ ಅವ್ಯವಸ್ಥೆ ಸರಿಪಡಿಸಿ ವಿದ್ಯಾರ್ಥಿಗಳ ಹಿತ ಕಾಪಾಡಬೇಕು ಎಂದು ಭೂದಾನಿಗಳು ಮತ್ತು ಸಮಾಜ ಸೇವಕರಾದ ಹುಳ್ಳಿ ಕೊಟ್ರಪ್ಪ ಹಾಗೂ ಇನ್ನೀತರ ಮುಖಂಡರು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು. ಸ್ಥಳ ಪರಿಶೀಲನೆ ನಡೆಸಿ ಸರಿಪಡಿಸಲು ಜಿಲ್ಲಾಧಿಕಾರಿಗಳು ಅಬಕಾರಿ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.ತಾವು ಹಿರಿಯ ರಂಗಭೂಮಿ ಕಲಾವಿದರಾಗಿದ್ದು ತಮಗೆ ವಯಸ್ಸಾಗಿದ್ದು ಮನೆ ಕಟ್ಟಿಸಲು ಧನಸಹಾಯ ನೀಡಬೇಕು ಎಂದು ಇದೆ ವೇಳೆ ಹಿರಿಯ ಕಲಾವಿದರಾದ ಡಾ.ಹೆಚ್. ಷಡಕ್ಷರಪ್ಪ ಅವರು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.



**ಸೌಜನ್ಯದಿಂದ ವರ್ತಿಸಿ:**
ಸಾರ್ವಜನಿಕರು ಸಲ್ಲಿಸಿದ ಅರ್ಜಿಗಳ ಪರಿಶೀಲನೆ ವೇಳೆ ಸಮರ್ಪಕ ಮಾಹಿತಿ ನೀಡದ ಅಧಿಕಾರಿಗಳ ಕಾರ್ಯವೈಖರಿಯ ಬಗ್ಗೆ ಜಿಲ್ಲಾಧಿಕಾರಿಗಳು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಅಧಿಕಾರಿಗಳು ಸಾರ್ವಜನಿಕರೊಂದಿಗೆ ಸರಿಯಾಗಿ ವರ್ತಿಸಿ ಸ್ಪಂದನೆ ನೀಡಬೇಕು ಎಂದು ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಜಿಲ್ಲಾ ಪಂಚಾಯತ್ ಸಿಇಓ ನೋಂಗ್ಜಾಯಿ ಮೊಹಮ್ಮದ್ ಅಲಿ ಅಕ್ರಮ ಶಾ, ಹರಪನಹಳ್ಳಿ ಸಹಾಯಕ ಆಯುಕ್ತರಾದ ಚಿದಾನಂದ ಗುರುಸ್ವಾಮಿ ಮತ್ತು ಜಿಲ್ಲಾಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳ ಸಮ್ಮುಖದಲ್ಲಿ ಜಿಲ್ಲಾಧಿಕಾರಿಗಳು ಸಾರ್ವಜನಿಕರ ಅಹವಾಲು ಆಲಿಸಿದರು.

ಕಾರ್ಯಕ್ರಮದಲ್ಲಿ ತಹಸೀಲ್ದಾರ ಗಿರೀಶಬಾಬು, ತಾಪಂ ಇಓ ಚಂದ್ರಶೇಖರ, ಡಿವೈಎಸ್ಪಿ ಮಹಾಂತೇಶ ಸಜ್ಜನ, ಪಿಎಸ್ಐ ಶಂಭುಲಿಂಗ್ ಹಿರೇಮಠ, ನರೇಗಾ ಸಹಾಯಕ ನಿರ್ದೇಶಕ ಸೋಮಶೇಖರ, ಸಿಡಿಪಿಓ ಜಿ ಅವಿನಾಶ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಇದ್ದರು.

**ಜಿಲ್ಲಾಧಿಕಾರಿಗಳಿಂದ ನಗರ ಸಂಚಾರ:**
ಜನಸ್ಪಂದನ ಕಾರ್ಯಕ್ರಮಕ್ಕೆ ಮೊದಲು ಜಿಲ್ಲಾಧಿಕಾರಿಗಳು ಹರಪನಹಳ್ಳಿ ನಗರ ಸಂಚಾರ ನಡೆಸಿದರು. ಸಹಾಯಕ ಆಯುಕ್ತರಾದ ಚಿದಾನಂದ ಗುರುಸ್ವಾಮಿ, ತಹಸೀಲ್ದಾರ ಗಿರೀಶಬಾಬು, ಪುರಸಭೆ ಮುಖ್ಯಾಧಿಕಾರಿ ಶಿವಕುಮಾರ ಎರಗುಡೆ ಅವರೊಂದಗೆ ಸೈಕಲ್ ಸವಾರಿ ನಡೆಸಿದರು. ಸೈಕಲ್ ಮೇಲೆ ಎಪಿಎಂಸಿಯಿಂದ ಹೊರಟು ಕೊಟ್ಟೂರ ಸರ್ಕಲ್, ಬಳಿಕ ಕೆಂಪಯ್ಯನಮಠ ಹತ್ತಿರ ಸಂಚರಿಸಿ ಶುಚಿತ್ವ ಕಾಯ್ದುಕೊಳ್ಳಲು ಜನತೆಗೆ ತಿಳಿಸಿದರು. ಬಳಿಕ ಟಿಎಂಎಇ ಸೊಸೈಟಿಯ ಶಾಲೆಗೆ ಭೇಟಿ ನೀಡಿ ವಿದ್ಯಾಭ್ಯಾಸದ ಬಗ್ಗೆ ಮಕ್ಕಳೊಂದಿಗೆ ಆತ್ಮೀಯವಾಗಿ ಮಾತನಾಡಿದರು. ಬಳಿಕ ಮಹೇಶ ಆಸ್ಪತ್ರೆಗೆ ತೆರಳಿ ಅಲ್ಲಿನ ಸ್ಕ್ಯಾನಿಂಗ್ ಯಂತ್ರ, ಚಿಕಿತ್ಸಾ ದರದ ಬಗ್ಗೆ ಪರಿಶೀಲಿಸಿದರು. ಡೆಂಗೆ ಜ್ವರ ಪರೀಕ್ಷೆಗೆ ಶುಲ್ಕ ಪಡೆಯುವಾಗ ಸರ್ಕಾರ ನಿಗದಿಪಡಿಸಿದ ನಿಯಮ ಪಾಲಿಸಲು ತಿಳಿಸಿದರು.

ತೆಗ್ಗಿನಮಠ ವೃತ್ತದಲ್ಲಿ ಚರಂಡಿ ವ್ಯವಸ್ಥೆಯ ಬಗ್ಗೆ ಪರಿಶೀಲಿಸಿದರು. ಆಯುಷ್ ಕಣ್ಣಿನ ಆಸ್ಪತ್ರೆಗೆ ತೆರಳಿದ ವೇಳೆ ಅಲ್ಲಿ ಪಡೆಯುತ್ತಿದ್ದ ಚಿಕಿತ್ಸೆಯ ದರ ಪರಿಶೀಲನೆ ನಡೆಸಿದರು.

ಸಿಪಿಐ ಕಚೇರಿಯ ಗ್ರಂಥಾಲಯ ಇಲಾಖೆಯ ಪ್ರದೇಶದ ಸುತ್ತಲು ವೀಕ್ಷಣೆ ನಡೆಸಿದರು. ಕಾರ್ ನಿಲ್ದಾಣದಲ್ಲಿ ಡ್ರೈವರಗಳ ಮನವಿ ಸ್ವೀಕರಿಸಿದರು. ಬಳಿಕ ಬಸ್ ನಿಲ್ದಾಣದ ಸುತ್ತಲು ಸಂಚರಿಸಿ ಸುತ್ತಲಿನ ಪರಿಸರ ಪರಿಶೀಲಿಸಿದರು. ಬಸ್ ನಿಲ್ದಾಣದ ಹತ್ತಿರದಲ್ಲಿ ಹೊಸದಾಗಿ ನಿರ್ಮಾಣವಾಗುತ್ತಿರುವ ತರಕಾರಿ ಮಾರುಕಟ್ಟೆಯ ವೀಕ್ಷಣೆ ನಡೆಸಿದರು.

ಜ್ಯೂನಿಯರ್ ಕಾಲೇಜ್ ಬಳಿಕ ಕನಕ ವೃತ್ತಕ್ಕೆ ಆಗಮಿಸಿ ಅಲ್ಲಿನ ಚರಂಡಿ ವ್ಯವಸ್ಥೆಯ ಬಗ್ಗೆ ಪರಿಶೀಲಿಸಿದರು. ಅಲ್ಲಿಂದ ಗುಡೇಕಟ್ಟೆ ಸರ್ಕಲ್ ಹಾಗೂ ಐಬಿ ಸರ್ಕಲ್‌ನಲ್ಲಿ ಸಂಚರಿಸಿ ಬಳಿಕ ಕಾರ್ಯಕ್ರಮದ ಸ್ಥಳಕ್ಕೆ ಆಗಮಿಸಿದರು.

# ವಿವಿಧೆಡೆ ಮೊಹರಂ ಹಬ್ಬ ನಿಷೇಧ

## ಜಿಲ್ಲೆಯಲ್ಲಿ ಜುಲೈ 7 ರಿಂದ ಜುಲೈ 17 ರವರೆಗೆ ಆಚರಿಸಲ್ಪಡುವ ಮೊಹರಂ

■ **ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯಾದ್ಯಾಂತ ಜುಲೈ 07 ರಿಂದ ಜುಲೈ 17 ರವರೆಗೆ ಜರುಗುವ ಮೊಹರಂ ಹಬ್ಬದ ಆಚರಣೆಯನ್ನು ಜಿಲ್ಲೆಯ ವಿವಿಧ ತಾಲ್ಲೂಕಿನ ಕೆಲ ಗ್ರಾಮಗಳಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಸಲುವಾಗಿ ನಿಷೇಧಿಸಿ ಬಳ್ಳಾರಿ ಜಿಲ್ಲಾಧಿಕಾರಿಗಳು ಆದೇಶ ಹೊರಡಿಸಿದ್ದಾರೆ.



ಮೊಹರಂ ಹಬ್ಬದ ಆಚರಣೆಯ ಸಂದರ್ಭ ದಲ್ಲಿ ವಿವಿಧ ತಾಲ್ಲೂಕುಗಳ ಕೆಲ ಗ್ರಾಮಗಳಲ್ಲಿ ವೈಶಮ್ಯ ಇರುವುದರಿಂದ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಹಾಗೂ ಮೊಹರಂ ಆಚರಿಸುವ ಸಂದರ್ಭದಲ್ಲಿ ಶಾಂತಿ ಮತ್ತು ಸುವ್ಯಸ್ಥೆಗೆ ಧಕ್ಕೆ ಉಂಟಾಗುವ ಬಗ್ಗೆ ವರದಿಗಳು ಇರುವುದರಿಂದ ಮುಂಜಾಗೃತ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದ್ದು, ಪೊಲೀಸ್ ಬಂದೋಬಸ್ತ್ ಪರಿಣಾಮಕಾರಿಯಾಗಿ ಜಾರಿಗೆ ತರಲು ಕರ್ನಾಟಕ ಪೊಲೀಸ್ ಕಾಯ್ದೆ 1963ರ ಕಲಂ 35 (ಎ) (ಬಿ) (ಡಿ) (ಇ) ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಜಿಲ್ಲಾಧಿಕಾರಿಗಳು, ಜುಲೈ 07 ರಿಂದ ಜುಲೈ 17 ರವರೆಗೆ ಆಚರಿಸಲ್ಪಡುವ ಮೊಹರಂ ಹಬ್ಬವನ್ನು ಜಿಲ್ಲೆಯ ವಿವಿಧ ತಾಲ್ಲೂಕುಗಳ ಕೆಲ ಗ್ರಾಮಗಳಲ್ಲಿ ನಿಷೇಧಿಸಲಾಗಿದೆ. ಈ ಸಂದರ್ಭದಲ್ಲಿ ಸಾರ್ವಜನಿಕವಾಗಿ ಜನರು ಗುಂಪು ಸೇರದಂತೆ ಮೆರವಣಿಗೆ ನಡೆಸದಂತೆ ಮತ್ತು ಪಂಜಾಗಳನ್ನು ಕೂಡಿಸದಂತೆ ಮೊಹರಂ ಹಬ್ಬವನ್ನು ಸಂಪೂರ್ಣವಾಗಿ ನಿಷೇಧಿಸ ಲಾಗಿದೆ ಎಂದು ಅವರು ಆದೇಶದಲ್ಲಿ ಸ್ಪಷ್ಟಪಡಿಸಿದ್ದಾರೆ. ಪ್ರತಿಬಂಧಕ ಆಜ್ಞೆಗೆ ವಿರುದ್ಧವಾಗಿ ಯಾರೊಬ್ಬರು ವರ್ತಿಸಿದರೆ, ಅವರು ಯಾವುದೇ ಪೊಲೀಸ್ ಅಧಿಕಾರಿಗಳಿಂದ ಇಂತಹ ವಸುಗಳನ್ನು ವಶ ಪಡಿಸಿಕೊಳ್ಳಲು ಪಾತ್ರರಾಗುವರು ಹಾಗೂ ಈ ರೀತಿ ಪಡೆಯಲ್ಪಟ್ಟ ಪದಾರ್ಥ ಸರ್ಕಾರಕ್ಕೆ ಜಮಾ ಮಾಡಲಾಗುವುದು. ಎಂದು ಆದೇಶದಲ್ಲಿ ತಿಳಿಸಿದ್ದಾರೆ.

### ಮೊಹರಂ ಹಬ್ಬ ನಿಷೇಧಿಸಲ್ಪಟ್ಟ ಗ್ರಾಮಗಳು

ಬಳ್ಳಾರಿಯ ಗಾಂಧಿನಗರ ಪೊಲೀಸ್ ಠಾಣೆ ವ್ಯಾಪ್ತಿಯ ತಾಳೂರು ರಸ್ತೆಯ ಕನ್ನಡ ನಗರ ಮುಖ್ಯ ರಸ್ತೆಯ (ನ್ಯಾಯಾಧೀಶರ ವಸತಿಗೃಹ ಕಾಂಪೌಂಡ್ ಪಕ್ಕದಲ್ಲಿ) ಮಹಾನಂದಿಕೊಟ್ಟಂ ಒಳಗಡೆ.

ಸಿರುಗುಪ್ಪ ಪೊಲೀಸ್ ಠಾಣೆ ವ್ಯಾಪ್ತಿಯ ಕೆ.ಸೂಗೂರು, ಮುದೇನೂರು, ಹೀರೆಹಾಳ್, ನಾಡಂಗ, ಬಂಡ್ರಾಳ್, ದೇಶನೂರು, ಕೆ.ಬೆಳಗಲ್ ಗ್ರಾಮಗಳು. ತೆಕ್ಕಲಕೋಟೆ ಪೊಲೀಸ್ ಠಾಣೆ ವ್ಯಾಪ್ತಿಯ ತೆಕ್ಕಲಕೋಟೆ, ಹಳೇಕೋಟೆ, ಉಪ್ಪಾರಹೊಸಳ್ಳಿ, ಉಡೇಗೋಳ, ಅರಳಿಗನೂರು ಗ್ರಾಮಗಳು. ಸಿರಿಗೇರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿನ ಸಿರಿಗೇರಿ, ಕೂರಿಗನೂರು, ತಾಳೂರು, ಕರೂರು ಗ್ರಾಮಗಳು. ಮೋಕಾ ಪೊಲೀಸ್ ಠಾಣೆ ವ್ಯಾಪ್ತಿಯ ವಣೇನೂರು, ಜಾಲಿಬೆಂಚಿ ಗ್ರಾಮಗಳು. ಬಳ್ಳಾರಿ ಗ್ರಾಮೀಣ ಪೊಲೀಸ್ ಠಾಣೆ ವ್ಯಾಪ್ತಿಯ ಕೊಳಗಲ್ಲು, ಕಪ್ಪಗಲ್ಲು, ಸಂಜೀವರಾಯನಕೋಟೆ ಗ್ರಾಮಗಳು. ತೋರಣಗಲ್ಲು ಪೊಲೀಸ್ ಠಾಣೆ ವ್ಯಾಪ್ತಿಯ ಡಿ.ಅಂತಾಪುರ, ಕಂಪ್ಲಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿನ ನಂ.15–ಗೋನಾಳು ಗ್ರಾಮದಲ್ಲಿ ನಿಷೇಧಿಸಲಾಗಿದೆ ಎಂದು ಅವರು ಆದೇಶದಲ್ಲಿ ತಿಳಿಸಿದ್ದಾರೆ.

# ಜು.10 ಕೊನೆದಿನ ನೌಕರರ ಕರಡು ಮತದಾರರ ಪಟ್ಟಿ ಆಕ್ಷೇಪಣೆಗೆ

■ **ಹಂಪಿ ಟೈಮ್ಸ್ ಹೊಸಪೇಟೆ**

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ 2024 ರಿಂದ 2029ನೇ ಸಾಲಿನ ಅವಧಿಗೆ ನಡೆಯುವ ಚುನಾವಣೆಗೆ ಸಂಬಂಧಿಸಿದಂತೆ, ಕರಡು ಮತದಾರರ ಪಟ್ಟಿಯನ್ನು ವಿಜಯನಗರ ಜಿಲ್ಲೆ ಹೊಸಪೇಟೆಯ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಭವನ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ. ಜು.10 ರವರೆಗೆ ಕರಡು ಮತದಾರರ ಪಟ್ಟಿಗೆ ಸಂಬಂಧಿಸಿದಂತೆ ಮತದಾರರ ಪಟ್ಟಿಯಲ್ಲಿ ಇಲಾಖಾವಾರು ಕೈಬಿಟ್ಟಿರುವ ನೌಕರರ ವಿವರಗಳನ್ನು ಆಕ್ಷೇಪಣೆಗಳನ್ನು ಸಲ್ಲಿಸುವವರು ಸೂಕ್ತ ದಾಖಲೆಗಳೊಂದಿಗೆ ಜಿಲ್ಲಾ ಶಾಖೆ ಹೊಸಪೇಟೆಯಲ್ಲಿ ಸಲ್ಲಿಸಲು ಕೋರಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಡ್ಲಿ ವೀರಭದ್ರೇಶ (9986210657) ರವರನ್ನು ಸಂಪರ್ಕಿಸ ಬಹುದು ಎಂದು ಸಂಘದ ಜಿಲ್ಲಾಧ್ಯಕ್ಷ ಜಿ.ಮಲ್ಲಿಕಾರ್ಜುನ ಗೌಡ ತಿಳಿಸಿದ್ದಾರೆ

# ಆರ್ಯ ವೈಶ್ಯ ಸಮುದಾಯ ಅಭಿವೃದ್ಧಿ ಸಾಲ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಬಳ್ಳಾರಿ**

ಕರ್ನಾಟಕ ಆರ್ಯ ವೈಶ್ಯ ಸಮುದಾಯ ಅಭಿವೃದ್ಧಿ ನಿಗಮದ ವತಿಯಿಂದ ಪ್ರಸಕ್ತ ಸಾಲಿಗೆ ವಿವಿಧ ಯೋಜನೆಗಳಡಿ ಸಾಲ ಸೌಲಭ್ಯಕ್ಕಾಗಿ ಅರ್ಹ ಆರ್ಯವೈಶ್ಯ ಸಮಾಜದವರಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ ಎಂದು ಕರ್ನಾಟಕ ಆರ್ಯ ವೈಶ್ಯ ಸಮುದಾಯ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ತಿಳಿಸಿದ್ದಾರೆ.

ಸ್ವಯಂ ಉದ್ಯೋಗ ನೇರ ಸಾಲ, ಆರ್ಯವೈಶ್ಯ ಆಹಾರ ವಾಹಿನಿ ಹಾಗೂ ವಾಸವಿ ಜಲಶಕ್ತಿ ಯೋಜನೆಗಳಿಗೆ ಸಾಲ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಸಲು ಆಗಸ್ಟ್ 31 ಕೊನೆಯ ದಿನಾಂಕವಾಗಿದೆ. ಆನ್‌ಲೈನ್ ವೆಬ್‌ಸೈಟ್ www.kacdc.karnataka.gov.in ಗೆ ಭೇಟಿ ನೀಡಿ ಅರ್ಜಿ ಸಲ್ಲಿಸಬಹುದು.

**ಸ್ವಯಂ –ಉದ್ಯೋಗ ನೇರಸಾಲ ಯೋಜನೆ:** ಕರ್ನಾಟಕ ಆರ್ಯವೈಶ್ಯ ಸಮುದಾಯದ ಅಭಿವೃದ್ಧಿ ನಿಗಮದಿಂದ ವ್ಯಾಪಾರ ಚಟುವಟಿಕೆ ಕೈಗೊಳ್ಳಲು ಸ್ವಯಂ ಉದ್ಯೋಗ ನೇರಸಾಲ ಯೋಜನೆಯಡಿ ರೂ.1 ಲಕ್ಷಗಳ ಸಾಲ–ಸಹಾಯ ಧನ ನೀಡಲಾಗುತ್ತಿದ್ದು, ಇದರಲ್ಲಿ ರೂ.20 ಸಾವಿರ ಸಹಾಯಧನವಿರುತ್ತದೆ. ಬಾಕಿ ಮೊತ್ತವನ್ನು ಶೇ.4ರ ಬಡ್ಡಿ ದರದಲ್ಲಿ ನೀಡಲಾಗುವುದು.

ವಯೋಮಿತಿಯು 45 ವರ್ಷಗಳಿಂದ 55 ವರ್ಷಗಳಿಗೆ ಹೆಚ್ಚಿಸಲಾಗಿದ್ದು, 2019–20 ಮತ್ತು 2020–21 ಸಾಲಿನ ಫಲಾನುಭವಿಗಳು ಪಡೆದ ಸಾಲವನ್ನು ನಿಗಧಿತ ಕಾಲ ಮಿತಿಯೊಳಗೆ ಮರು ಪಾವತಿಸಿದಲ್ಲಿ ಪುನಃ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ.

**ಆರ್ಯ ವೈಶ್ಯ ಆಹಾರ ವಾಹಿನಿ ಯೋಜನೆ:** ನೂತನ ಯೋಜನೆಯಾದ ಆರ್ಯವೈಶ್ಯ ಆಹಾರ ವಾಹಿನಿ ಪಡೆಯಲು ಅಭ್ಯರ್ಥಿಯು ಹಳದಿ ಫಲಕವುಳ್ಳ ಆಟೋ, ಟ್ರಕ್, ಕಾರ್ ಇತ್ಯಾದಿಗಳನ್ನು ಖರೀದಿಸಬಹುದು.

ಅರ್ಜಿದಾರರು ಯಾವುದಾದರೂ ಬ್ಯಾಂಕ್‌ನಲ್ಲಿ ಸಾಲ ಪಡೆಯಬಹುದು ಹಾಗೂ ನಿಗಮದಿಂದ ರೂ.1ಲಕ್ಷಗಳವರೆಗೆ ಸಬ್ಸಿಡಿ ನೀಡಲಾಗುತ್ತದೆ. ಫಲಾನುಭವಿಗಳು ಯಾವುದಾದರು ವಾಹನವನ್ನು ಫ್ಯಾಬ್ರಿಕೇಷನ್ ಮಾಡಿ ಮೊಬೈಲ್ ಕ್ಯಾಂಟೀನ್ ಆಗಿ ಪರಿವರ್ತಿಸಿದ್ದಲ್ಲಿ ಹೆಚ್ಚುವರಿಯಾಗಿ ರೂ.100ಲಕ್ಷಗಳ ಸಹಾಯ ಧನ ನೀಡಲಾಗುತ್ತದೆ.

**ವಾಸವಿ ಜಲಶಕ್ತಿ ಯೋಜನೆ*:** ಸಣ್ಣ ರೈತರಿಗೆ ಕೃಷಿ ಚಟುವಟಿಕೆಗಳಿಗಾಗಿ ನೀರಾವರಿ ಸೌಲಭ್ಯವನ್ನು ಕಲ್ಪಿಸುವ ವಾಸವಿ ಜಲಶಕ್ತಿ ಯೋಜನೆಯನ್ನು ಹಮ್ಮಿಕೊಳ್ಳಲಾಗಿದ್ದು, ವಯೋಮಿತಿಯು 50 ರಿಂದ 55 ರವರೆಗೆ ಹೆಚ್ಚಿಸಲಾಗಿದೆ. ರೈತರು ಕನಿಷ್ಠ 2 ರಿಂದ ಗರಿಷ್ಟ 15 ಎಕರೆ ಜಮೀನು ಹೊಂದಿರಬೇಕು.

ಹೆಚ್ಚಿನ ಮಾಹಿತಿಗಾಗಿ ನಿಗಮದ ಜಿಲ್ಲಾ ಕಚೇರಿಯ ಸಹಾಯವಾಣಿ ಸಂ.08392–267038 ಗೆ ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

# ಗೃಹಲಕ್ಷ್ಮಿಯೋಜನೆ: ಲಿಂಗತ್ವ ಅಲ್ಪಸಂಖ್ಯಾತರಿಂದ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಗೃಹಲಕ್ಷ್ಮಿ ಯೋಜನೆಯಡಿ ಲಿಂಗತ್ವ ಅಲ್ಪಸಂಖ್ಯಾತ ಫಲಾನುಭವಿಗಳಿಗೆ ಸೌಕರ್ಯ ಒದಗಿಸಲು ಆಡಳಿತಾತ್ಮಕ ಮಂಜೂರಿ ನೀಡಲಾಗಿದ್ದು, ಈ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಜಿಲ್ಲಾಧಿಕಾರಿಗಳು ವಿತರಿಸುವ ಟ್ರಾನ್ಸ್‌ಜೆಂಡರ್ ಐಡಿ ಕಾರ್ಡ್ ಹೊಂದಿರುವ ಲಿಂಗತ್ವ ಅಲ್ಪಸಂಖ್ಯಾತ ಫಲಾನುಭವಿಗಳು ಗೃಹಲಕ್ಷ್ಮಿ ಯೋಜನೆಯಡಿ ಸೌಲಭ್ಯ ಪಡೆಯಲು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರ ಕಚೇರಿ, ಬಸವೇಶ್ವರ ಬಡಾವಣೆ, ಮಾತಾ ಕಣ್ಣಿನ ಆಸ್ಪತ್ರೆ ಹತ್ತಿರ, ಮೆಟ್ರೋ ಫ್ಯಾಷನ್ ಬಿಲ್ಡಿಂಗ್ ಮೇಲೆ, ಹೊಸಪೇಟೆ ವಿಜಯನಗರ ಜಿಲ್ಲೆ ಈ ಕಚೇರಿಯನ್ನು ಸಂಪರ್ಕಿಸ ಬಹುದಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾದ ಶ್ವೇತಾ ತಿಳಿಸಿದ್ದಾರೆ.

# ಅಂಗನವಾಡಿಗಳಿಗೆ ಕಳಪೆ ಆಹಾರ ಪೂರೈಸಿದರೆ ಕಠಿಣ ಕ್ರಮ ಎಚ್ಚರಿಕೆ

## ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಆರ್. ಹೆಬ್ಬಾಳಕರ್ ಹೇಳಿಕೆ । ಆಹಾರ ಸಾಮಗ್ರಿಗಳ ಗುಣಮಟ್ಟ ಪರಿಶೀಲನೆ

■ **ಹಂಪಿ ಟೈಮ್ಸ್ ಬಳ್ಳಾರಿ**

ಬಳ್ಳಾರಿ ತಾಲ್ಲೂಕಿನ ಜಾಲಿಬೆಂಚಿ ಕ್ರಾಸ್ ನಲ್ಲಿರುವ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಪ್ರಾಯೋಜಿಸಲ್ಪಟ್ಟ ಮಹಿಳಾ ಪೂರಕ ಪೌಷ್ಟಿಕ ಆಹಾರ ಉತ್ಪಾದನಾ ಘಟಕಕ್ಕೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀಆರ್. ಹೆಬ್ಬಾಳಕರ್ ಶನಿವಾರ ದಿಢೀರ್ ಭೇಟಿ ನೀಡಿ, ಪರಿಶೀಲಿಸಿದರು.

ಘಟಕದಲ್ಲಿ ಉತ್ಪಾದನಾ ಆಹಾರ ಸಾಮಗ್ರಿಗಳ ಗುಣಮಟ್ಟವನ್ನು ಪರೀಕ್ಷಿಸಿದರು. ಉತ್ಪಾದನಾ ಘಟಕದ ಕಾರ್ಯನಿರತ ಮಹಿಳೆಯರಿಂದಲೇ ಆಹಾರ ಸಾಮಗ್ರಿಗಳ ಗುಣಮಟ್ಟದ ಬಗ್ಗೆ ಮಾಹಿತಿ ಪಡೆದರು. ಅಂಗನವಾಡಿಗಳಿಗೆ ಪೂರೈಕೆ ಮಾಡುವ ಆಹಾರ ಸಾಮಗ್ರಿಗಳಲ್ಲಿ, ಅದರಲ್ಲೂ ಉತ್ಪಾದನೆಯಲ್ಲಿ ಗುಣಮಟ್ಟವನ್ನು ಕಾಯ್ದುಕೊಳ್ಳಬೇಕೆಂದು ಸಂಬಂಧಪಟ್ಟವರಿಗೆ ಸಚಿವರು ಸೂಚಿಸಿದರು.

ಇದೇ ವೇಳೆ, ಪುಷ್ಟಿ ನ್ಯೂಟ್ರಿಮಿಕ್ಸ್, ಗೋಧಿ ನುಚ್ಚು ಹಾಲಿನ ಪುಡಿ, ಅರಿಶಿಣ ಪುಡಿ ಇತ್ಯಾದಿ ಆಹಾರ ಸಾಮಗ್ರಿಗಳ ಗುಣಮಟ್ಟವನ್ನು ಪರೀಕ್ಷಿಸಿದರಲ್ಲದೇ, ಉತ್ಪಾದನಾ ಆಹಾರ ಸಮಗ್ರಗಳ ಬಗ್ಗೆ ಸ್ಥಳದಲ್ಲಿದ್ದ ಶಿಶು ಅಭಿವೃದ್ಧಿ ಯೋಜನಾ ಅಧಿಕಾರಿಯಿಂದ ಮಾಹಿತಿ ಪಡೆದರು.



ಈ ವೇಳೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಂಟಿ ನಿರ್ದೇಶಕರು ಹಾಗೂ ಸಚಿವರ ವಿಶೇಷ ಕರ್ತವ್ಯ ಅಧಿಕಾರಿ ಬಿ.ಎಚ್ ನಿಶ್ಚಲ್, ಇಲಾಖೆಯ ಉಪ ನಿರ್ದೇಶಕ ಕೆ. ಹೆಚ್. ವಿಜಯಕುಮಾರ್ ಮತ್ತಿತರ ಅಧಿಕಾರಿಗಳು ಹಾಜರಿದ್ದರು.

## AFFIDAVIT

**I, BANDIHALLI VIJYAKUMARA S/o Huleppa**
age 34 years, R/o K.K.Hatti Village, Kudligi Tq, Vijayanagara Dist.
My nama as entered in my old and new Adhara Card as **BHANDIHALLI VIJYAKUMARA S/o Huleppa nad VIJYAKUMAR S/o Huleppa**
**above both name are one and same** vide affidavit before notary public P. CHATRAPPA, Hagaribommanahalli on dt: 03.07.2024

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA